ಖಾಸಗಿ ಪ್ರಸಾರ



# ಶ್ರೀದೇವಿ ಅಂತರಂಗ

ಸೇವೆ - ಶಿಕ್ಷಣ - ಅಧ್ಯಾತ್ಮದ ಜೊತೆಗೆ ಪಯಣ

ಮಾಸಪತ್ರಿಕೆ
ಸಂಪುಟ 1, ಸಂಚಿಕೆ 6
ಏಪ್ರಿಲ್ 2023

SHRIDEVI ANTARANGA
Monthly Magazine




SHRIDEVI EDUCATION



**ಪ್ರಧಾನ ಸಂಪಾದಕರ ಅಂತರಂಗ**

ಡಾ. ಎಂ.ಆರ್. ಹುಲಿನಾಯ್ಕರ್
ಸಂಸ್ಥಾಪಕ ಅಧ್ಯಕ್ಷರು
ಶ್ರೀದೇವಿ ಶಿಕ್ಷಣ ಸಂಸ್ಥೆಗಳ ಸಮೂಹ

**ಶೇಷನ್ ನಂತರ ಬಂದ ಎಲ್ಲಾ ಚುನಾವಣಾ ಮುಖ್ಯ ಆಯುಕ್ತರು ಶೇಷನ್ ಅವರ ಮಾರ್ಗವನ್ನು ಅನುಸರಿಸುತ್ತಿದ್ದಾರೆ.**

## ಪ್ರಜಾಪ್ರಭುತ್ವದ ಯಶಸ್ಸಿನಲ್ಲಿ ಮತದಾರರ ಪಾತ್ರ ಮುಖ್ಯ

ಮೇ 10ರಂದು ಕರ್ನಾಟಕ ವಿಧಾನಸಭೆಗೆ ಮತದಾನ ನಿಗದಿಯಾಗಿದೆ. ಮತ ಎಣಿಕೆ 13ರಂದು ನಡೆಯುತ್ತದೆ. ಮೇ ಮೂರನೆಯ ವಾರದಲ್ಲಿ ಕರ್ನಾಟಕದ ಜನತೆ ಹೊಸ ಸರ್ಕಾರವನ್ನು ನಿರೀಕ್ಷೆ ಮಾಡಬಹುದು.

ಕರ್ನಾಟಕ ವಿಧಾನಸಭೆಯ ಒಟ್ಟು 224 ಕ್ಷೇತ್ರಗಳಿಗೆ ಒಂದೇ ಹಂತದಲ್ಲಿ ಮತದಾನ ನಡೆಯುತ್ತದೆ. ಮತದಾನ ನಡೆದು ಕೇವಲ ಮೂರು ದಿನದಲ್ಲಿ ಫಲಿತಾಂಶ ಸಹ ಹೊರಬೀಳುತ್ತದೆ. ಭಾರತದ ಚುನಾವಣಾ ಆಯೋಗದ ದಕ್ಷತೆಗೆ ಇದೊಂದು ನಿದರ್ಶನ. ಅದಕ್ಕಾಗಿ ಚುನಾವಣಾ ಆಯೋಗವನ್ನು ಅಭಿನಂದಿಸಲೇಬೇಕು.

ಕರ್ನಾಟಕ ವಿಧಾನಸಭೆಯ ಚುನಾವಣೆಯನ್ನು ಚುನಾವಣಾ ಆಯೋಗ ಅತ್ಯಂತ ಪಾರದರ್ಶಕವಾಗಿ ನಡೆಸುತ್ತಿರುವುದು ಸ್ವಾಗತಾರ್ಹ ವಿಚಾರ. ಇದಕ್ಕಾಗಿ ಚುನಾವಣಾ ಆಯೋಗಕ್ಕೆ ಅಭಿನಂದನೆ ಸಲ್ಲಬೇಕು.

ರಾಷ್ಟ್ರದಲ್ಲಿ 1990ರಲ್ಲಿ ಮುಖ್ಯ ಚುನಾವಣಾ ಆಯುಕ್ತರಾದ ಶ್ರೀ ಟಿ.ಎನ್.ಶೇಷನ್ ಅವರು (ಜನನ 1932–ಮರಣ–2019) ಭಾರತದಲ್ಲಿ ಚುನಾವಣೆಯ ಸ್ವರೂಪವನ್ನು ಬದಲಾಯಿಸಿದರು. ಟಿ.ಎನ್.ಶೇಷನ್ ಅವರು ತಮಿಳುನಾಡು ಮೂಲದ ಐಎಎಸ್ ಅಧಿಕಾರಿ. ತಮ್ಮ 22ನೆಯ ವಯಸ್ಸಿನಲ್ಲಿ ಐ.ಎ.ಎಸ್.ಪದವಿ ಪಡೆಯುತ್ತಾರೆ. ಹಾರ್ವಡ್ ವಿಶ್ವವಿದ್ಯಾನಿಲಯದ ಮೂಲಕ ಸಾರ್ವಜನಿಕ ಆಡಳಿತದಲ್ಲಿ ಸ್ನಾತಕೋತ್ತರ ಪದವಿ ಪಡೆಯುತ್ತಾರೆ. ಕೇಂದ್ರ ಸಚಿವಸಂಪುಟದ ಕಾರ್ಯದರ್ಶಿಯಾಗಿ ಕರ್ತವ್ಯ ನಿರ್ವಹಣೆ ಮಾಡಿರುತ್ತಾರೆ. ಪ್ರಧಾನಿ ಚಂದ್ರಶೇಖರ್ ಸಚಿವ ಸಂಪುಟದಲ್ಲಿ ಭಾರತ ಸರ್ಕಾರದ ಕಾನೂನು ಸಚಿವರಾಗಿದ್ದ ಶ್ರೀ ಸುಬ್ರಹ್ಮಣ್ಯಸ್ವಾಮಿ ಅವರಿಗೆ ಆಪ್ತರಾಗಿದ್ದ ಶ್ರೀ ಶೇಷನ್ 1990ರಲ್ಲಿ ಭಾರತದ ಚುನಾವಣಾ ಆಯೋಗದ ಮುಖ್ಯ ಆಯುಕ್ತರಾಗಿ ನೇಮಕಗೊಳ್ಳುತ್ತಾರೆ. 1996ರ ತನಕ ಅವರು ಭಾರತ ಚುನಾವಣಾ ಆಯೋಗದ ಮುಖ್ಯ ಚುನಾವಣಾ ಆಯಕ್ತರಾಗಿ ಕರ್ತವ್ಯ ನಿರ್ವಹಿಸುತ್ತಾರೆ. ಶ್ರೀಯುತ



ಟಿ.ಎನ್.ಶೇಷನ್ ಅವರಿಂದಾಗಿ ಭಾರತದ ಚುನಾವಣಾ ಆಯೋಗಕ್ಕೆ ಸ್ವಾಯತ್ತ ಸ್ಥಾನಮಾನ ಪಡೆದ ಸಂಸ್ಥೆ ಎಂಬ ಖ್ಯಾತಿ ಲಭಿಸಿತು. ಶ್ರೀ ಶೇಷನ್ ಚುನಾವಣಾ ಆಯೋಗಕ್ಕೆ ಯಾವುದೇ ಹೊಸ ಕಾನೂನಿನ ಬೆಂಬಲ ಪಡೆಯಲಿಲ್ಲ. ಈಗಾಗಲೇ ಆಯೋಗದಲ್ಲಿದ್ದ ಕಾನೂನಿನ ಬಲದಿಂದಲೇ ಭಾರತದ ಚುನಾವಣೆಯ ಪ್ರಕ್ರಿಯೆಯನ್ನು ಬದಲಾಯಿಸಿದರು. ಚುನಾವಣಾ ಆಯೋಗಕ್ಕೆ ಅಮೂಲ್ಯ ಕಾನೂನಿನ ರಕ್ಷಣೆಯಿದೆ. ಸಂವಿಧಾನಕ್ಕೆ ಬದ್ಧವಾಗಿ ಚುನಾವಣಾ ಆಯೋಗ ಕೆಲಸ ಮಾಡಬೇಕೇ ವಿನಹಃ ರಾಜಕಾರಣಿಗಳ ಇಚ್ಛೆಗೆ ಅನುಸಾರವಾಗಿ ಅಲ್ಲ ಎಂಬುದನ್ನು ಶ್ರೀ ಶೇಷನ್ ತೋರಿಸಿಕೊಟ್ಟರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ತಮ್ಮ ಕೆಲಸ ಕಾರ್ಯಗಳಿಂದಾಗಿ ತುದಿಗಾಲ ಮೇಲೆ ನಿಲ್ಲಿಸಿದ ಕೀರ್ತಿ ಶೇಷನ್ ಅವರಿಗೆ ಸಲ್ಲುತ್ತದೆ. ಒಬ್ಬ ನಿಷ್ಠಾವಂತ ಅಧಿಕಾರಿ ಜಡ್ಡುಗಟ್ಟಿರುವ ಆಡಳಿತ ವ್ಯವಸ್ಥೆಗೆ ಹೇಗೆ ಶಾಕ್ ಟ್ರೀಟ್‌ಮೆಂಟ್ ಕೊಡಬಲ್ಲ ಎಂಬುದಕ್ಕೆ ಶೇಷನ್ ಸದಾ ಉದಾಹರಣೆಯಾಗಿರುತ್ತಾರೆ. ಅವರು ಆ ಕಾಲದಲ್ಲಿ ಅತ್ಯಂತ ಜನಪ್ರಿಯ ವ್ಯಕ್ತಿಯಾಗಿದ್ದರು. ಯುವಜನಾಂಗದ ಕಣ್ಮಣಿಗಳಾಗಿದ್ದರು.

ಶ್ರೀ ಶೇಷನ್ ನಂತರ ಬಂದ ಎಲ್ಲಾ ಚುನಾವಣಾ ಮುಖ್ಯ ಆಯುಕ್ತರು ಶೇಷನ್ ಅವರ ಮಾರ್ಗವನ್ನು ಅನುಸರಿಸುತ್ತಿದ್ದಾರೆ. ಈ ಮನೋಭಾವ ಜಿಲ್ಲೆ ಮತ್ತು ತಾಲ್ಲೂಕು ಮಟ್ಟದ ಅಧಿಕಾರಿಗಳ ತನಕ ಹರಿದು ಬಂದಿರುವುದನ್ನು ಕಾಣಬಹುದು. ಚುನಾವಣೆ ಘೋಷಣೆಯಾಗುತ್ತಿದ್ದಂತೆ ಚುನಾವಣೆಗೆ ನಿಯುಕ್ತಿಗೊಂಡ ಅಧಿಕಾರಿಗಳು ಜಾಗೃತರಾಗುತ್ತಾರೆ.

▶▶ 7ನೇ ಪುಟಕ್ಕೆ...



ರಾಕೇಶ್.ಎ **89.2%** | ದೀಪು ಎಸ್.ಎ **86.8%** | ಐಶ್ವರ್ಯ ಎಲ್.ಎನ್. **81.0%** | ನವ್ಯ.ಜಿ. **85.2%** | ಪ್ರೇರಣಾ **84.4%**



ವಂದನಾ.ಎನ್ **82.0%** | ಮೇಹಕ್ ಶರ್ಮ **84.0%** | ಮನೀಶಿಕ್ **79.25%** | ಕೋಮಲ್ ಬಾಡಿ **82.0%**

## ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಕಾಲೇಜಿನಲ್ಲಿ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳ ಸಾಧನೆ

ರಾಜೀವ್ ಗಾಂಧಿ ಆರೋಗ್ಯ ವಿಶ್ವ ವಿದ್ಯಾಲಯವು ಎಂ.ಬಿ.ಬಿ.ಎಸ್. ಪದವಿ ಮುಗಿಸಿದ ವಿದ್ಯಾರ್ಥಿಗಳಿಗೆ ವಿವಿಧ ರ್‍ಯಾಂಕ್‌ಗಳನ್ನು ಪ್ರಕಟಿಸಿದೆ. ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವಿದ್ಯಾರ್ಥಿಗಳು ಒಟ್ಟು ರಾಜ್ಯಕ್ಕೆ 12 ರ್‍ಯಾಂಕ್‌ಗಳನ್ನು ಪಡೆದುಕೊಂಡಿರುತ್ತಾರೆ. ವಿವಿಧ ವಿಭಾಗಗಳಲ್ಲಿ ರ್‍ಯಾಂಕ್‌ನ್ನು ಪಡೆದು ಕಾಲೇಜಿಗೆ ಕೀರ್ತಿಯನ್ನು ತಂದಿರುತ್ತಾರೆ.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆ ಇ.ಎನ್.ಟಿ ವಿಭಾಗದಿಂದ ರಾಕೇಶ್.ಎ 89.2%. ಅಂಕ ಪಡೆದು ರ್‍ಯಾಜಕ್ಕೆ ಪ್ರಥಮ ರ್‍ಯಾಂಕ್‌ನ್ನು ಪಡೆದಿದ್ದಾರೆ. ಇದೇ ವಿಭಾಗದಿಂದ ದೀಪು ಎಸ್.ಎ 86.8% ಅಂಕ ಪಡೆದು ತೃತೀಯ ರ್‍ಯಾಂಕ್ ಪಡೆದಿರುತ್ತಾರೆ, ನವ್ಯ.ಜಿ. 85.2% ಅಂಕ ಪಡೆದು ಏಳನೇ ರ್‍ಯಾಂಕ್ ಪಡೆದಿರುತ್ತಾರೆ. ಪ್ರೇರಣಾ 84.4% ಅಂಕ ಪಡೆದು 9ನೇ ರ್‍ಯಾಂಕ್ ಪಡೆದಿರುತ್ತಾರೆ, ಮೇಹಕ್‌ಶರ್ಮ 84% ಅಂಕ ಪಡೆದು 9ನೇ ರ್‍ಯಾಂಕ್ ಪಡೆದಿರುತ್ತಾರೆ.

ಅಂಗರಚನಾ ಶಾಸ್ತ್ರ ವಿಭಾಗದಲ್ಲಿ ದೀಪು ಎಸ್.ಎ 82.% ಅಂಕ ಪಡೆದು 9ನೇ ರ್‍ಯಾಂಕ್ ಪಡೆದಿರುತ್ತಾರೆ ಹಾಗೂ ವಂದನಾ.ಎನ್ 82% ಅಂಕ ಪಡೆದು 9ನೇ ರ್‍ಯಾಂಕ್ ಪಡೆದಿರುತ್ತಾರೆ. ಸೂಕ್ಷ್ಮ ಜೀವಾಣುಶಾಸ್ತ್ರ ವಿಭಾಗದಿಂದ ವಂದನಾ.ಎನ್ 79.25% ಅಂಕ ಪಡೆದು 9ನೇ ರ್‍ಯಾಂಕ್ ಪಡೆದಿರುತ್ತಾರೆ. ಮತ್ತು ಮನೀಶಿಕ್ 79.25% ಅಂಕ ಪಡೆದು 9ನೇ ರ್‍ಯಾಂಕ್ ಪಡೆದಿರುತ್ತಾರೆ. ಮಕ್ಕಳ ವೈದ್ಯಕೀಯ ಶಾಸ್ತ್ರ ವಿಭಾಗದಿಂದ ಮೇಹಕ್‌ಶರ್ಮ 79.2% ಅಂಕ ಪಡೆದು 9ನೇ ರ್‍ಯಾಂಕ್ ಪಡೆದಿರುತ್ತಾರೆ. ಸಮುದಾಯ ಆರೋಗ್ಯ ವೈದ್ಯಶಾಸ್ತ್ರ ವಿಭಾಗದಿಂದ ಐಶ್ವರ್ಯ ಎಲ್.ಎನ್. 81% ಅಂಕ ಪಡೆದು 5ನೇ ರ್‍ಯಾಂಕ್ ಪಡೆದಿರುತ್ತಾರೆ. ನ್ಯಾಯ ವಿಧಿವಿಜ್ಞಾನ ಶಾಸ್ತ್ರ ವಿಭಾಗದಿಂದ ಕೋಮಲ್ 82% ಅಂಕ ಪಡೆದು 10ನೇ ರ್‍ಯಾಂಕ್ ಪಡೆದಿರುತ್ತಾರೆ.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ಮೊದಲನೇ ವರ್ಷ ಎಂ.ಬಿ.ಬಿ.ಎಸ್.ನಲ್ಲಿ 12 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ, (ಡಿಕ್ಟಿಷನ್), 64 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಹಾಗೂ 50 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಒಟ್ಟಾರೆಯಾಗಿ ಶೇ.89% ಫಲಿತಾಂಶ ಬಂದಿರುತ್ತದೆ. ಎರಡನೇ ವರ್ಷ ಎಂ.ಬಿ.ಬಿ.ಎಸ್.ನಲ್ಲಿ 12 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ, (ಡಿಕ್ಟಿಷನ್), 70 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಹಾಗೂ 29 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಒಟ್ಟಾರೆಯಾಗಿ ಶೇ.73% ಫಲಿತಾಂಶದಿಂದ ತೇರ್ಗಡೆಯಾಗಿದ್ದಾರೆ. ಮೂರನೇ ವರ್ಷ ಎಂ.ಬಿ.ಬಿ.ಎಸ್.ನಲ್ಲಿ 8 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿ, (ಡಿಕ್ಟಿಷನ್), 71 ವಿದ್ಯಾರ್ಥಿಗಳು ಪ್ರಥಮ ದರ್ಜೆಯಲ್ಲಿ ಹಾಗೂ 20 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿರುತ್ತಾರೆ. ಒಟ್ಟಾರೆಯಾಗಿ ಶೇ.88% ಫಲಿತಾಂಶದಿಂದ ತೇರ್ಗಡೆಯಾಗಿರುತ್ತಾರೆ.

ಒಟ್ಟಾರೆಯಾಗಿ 32 ವಿದ್ಯಾರ್ಥಿಗಳು ಅತ್ಯುತ್ತಮ ಶ್ರೇಣಿಯಲ್ಲಿ (ಡಿಕ್ಟಿಷನ್), 205 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ಹಾಗೂ 89 ವಿದ್ಯಾರ್ಥಿಗಳು ದ್ವಿತೀಯ ದರ್ಜೆಯಲ್ಲಿ ತೇರ್ಗಡೆ ಹೊಂದಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯಕ್ಕೆ ರಾಜ್ಯ ಮಟ್ಟದಲ್ಲಿ ಒಳ್ಳೆಯ ಫಲಿತಾಂಶದಿಂದ ತೇರ್ಗಡೆ ಹೊಂದಿ ಕಾಲೇಜಿಗೆ ಕೀರ್ತಿ ಪ್ರಗತಿ ಸಾಧಿಸಿದ್ದಾರೆ.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ವೈದ್ಯಕೀಯ ರ್‍ಯಾಂಕ್ ಪಡೆದ ವಿದ್ಯಾರ್ಥಿಗಳಿಗೆ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ. ಆರ್.ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ನಿರ್ದೇಶಕರಾದ ಡಾ.ರಮಣ್ ಎಂ.ಹುಲಿನಾಯ್ಕರ್ ಮತ್ತು ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಪ್ರಾಂಶುಪಾಲರಾದ ಡಾ.ಎಂ.ಎಲ್. ಹರೇಂದ್ರಕುಮಾರ್, ಶ್ರೀದೇವಿ ಆಸ್ಪತ್ರೆಯ ಸ್ತ್ರೀರೋಗ ಮತ್ತು ಪ್ರಸೂತಿ ವಿಭಾಗದ ಮುಖ್ಯಸ್ಥರು ಹಾಗೂ ಉಪಪ್ರಾಂಶುಪಾಲರಾದ ಡಾ.ರೇಖಾಗುರುಮೂರ್ತಿ, ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ. ಮೋಹನ್‌ಕುಮಾರ್, ನೇತ್ರ ತಜ್ಞರಾದ ಡಾ.ಲಾವಣ್ಯ ಮತ್ತು ಆಡಳಿತಾ ವಿಭಾಗದ ಉಪಪ್ರಾಂಶುಪಾಲರಾದ ಡಾ.ಹೇಮಂತ್‌ರಾಜ್.ಎಂ.ಎನ್. ಹಾಗೂ ವಿವಿಧ ವಿಭಾಗದ ಮುಖ್ಯಸ್ಥರು ಹಾಗೂ ಉಪನ್ಯಾಸಕರು ವಿದ್ಯಾರ್ಥಿಗಳಿಗೆ ಶುಭ ಹಾರೈಸಿದರು.

ವರದಿ: ಎನ್.ಆನಂದ

ಬಸವಣ್ಣ ಅವರು ಸ್ತ್ರೀಗೆ ಇಷ್ಟಲಿಂಗ ಧರಿಸಿ ಸ್ವತಂತ್ರವಾಗಿ ದೇವಾರಾಧನೆ ಮಾಡಲು ಅವಕಾಶ ಮಾಡಿಕೊಟ್ಟರು. 'ಹೆಣ್ಣು ಮಾಯೆಯಲ್ಲ, ಹೆಣ್ಣು ರಾಕ್ಷಿಸಿಯಲ್ಲ, ಹೆಣ್ಣು ಕಪಿಲಸಿದ್ಧ ಮಲ್ಲಿಕಾರ್ಜುನನ ಸಿದ್ಧರೂಪ' ಎಂದು ಆ ವಚನಕಾರರು ಬರೆಯುವಂತೆ ಬಸವಣ್ಣ ಅವರು ಪ್ರೇರಣೆ ನೀಡಿದ್ದರು.

## ಸಂಪಾದಕರ ವಾಣಿ



**ಅಂಬಿಕಾ ಎಂ ಹುಲಿನಾಯ್ಕರ್**
ಆಡಳಿತಾಧಿಕಾರಿ,
ಶ್ರೀದೇವಿ ಇಂಜಿನಿಯರಿಂಗ್ ಕಾಲೇಜು

# ಭಕ್ತಿಭಂಡಾರಿ ಶ್ರೀ ಬಸವಣ್ಣ

## ಕನ್ನಡನಾಡಿನ ಹಲವು ಯುಗದ ಪುಣ್ಯದ ಫಲ

2023ರ ಏಪ್ರಿಲ್ 23ರ ಅತ್ಯಂತ ಪವಿತ್ರವಾದ ಅಕ್ಷಯತೃತೀಯ ದಿನ. ವಿವಾಹ ಕಾರ್ಯಕ್ರಮಗಳಿಗೆ ಹೇಳಿ ಮಾಡಿಸಿದ ದಿನವೆಂದು ವೈದಿಕ ಸಂಪ್ರದಾಯದ ಪುರೋಹಿತರು ಹೇಳುತ್ತಾರೆ. ಚಿನ್ನವನ್ನು ಕೊಳ್ಳಲು ಈ ದಿನ ಶ್ರೇಷ್ಠ ಎಂಬ ನಂಬಿಕೆ ಇತ್ತೀಚಿಗೆ ಬೆಳೆದಿದೆ. ಇವುಗಳ ಜೊತೆ ಅಂದು 'ವಿಶ್ವ ಪುಸ್ತಕದ ದಿನ'. ಪುಸ್ತಕ ಜ್ಞಾನದ ಸಂಕೇತ. ಇವುಗಳ ಜೊತೆಗೆ ಕನ್ನಡನಾಡಿನ ಮಕುಟಮಣಿ, ಅನುಭವ ಮಂಟಪದ ರೂವಾರಿ, ಕಲ್ಯಾಣದ ಕ್ರಾಂತಿಯ ನೇತಾರ, ದೇಶದಲ್ಲೇ ಮೊತ್ತ ಮೊದಲ ಭಾರಿಗೆ ಸಮತಾ ಸಮಾಜ ನಿರ್ಮಾಣದ ಕನಸು ಕಂಡಿದ್ದ ದಾರ್ಶನಿಕ, ಕಾವ್ಯಪ್ರತಿಭೆಯಿಂದ ವಚನಸಾಹಿತ್ಯಕ್ಕೆ ಅಮೂಲ್ಯ ಕೊಡುಗೆ ನೀಡಿರುವ, ಅನುಪಮ ಶಿವಭಕ್ತರಾಗಿರುವ ಭಕ್ತಿಭಂಡಾರಿ ಬಸವಣ್ಣ ಅವರ ಜನ್ಮದಿನವೂ ಹೌದು! ಕನ್ನಡನಾಡಿನ ಪ್ರಾತಃಸ್ಮರಣೀಯರಲ್ಲಿ ಬಸವಣ್ಣನವರಿಗೆ ಅಗ್ರಸ್ಥಾನವಿದೆ. ಸುಮಾರು ಎಂಟುನೂರು ವರ್ಷಗಳ ಹಿಂದೆ ಬದುಕಿದ್ದ ಬಸವಣ್ಣ ತಮ್ಮ ಕಾಲದ ಚಿಂತನೆಗಳನ್ನು ಮೀರಿ ಚಿಂತಿಸಿದ್ದರು. ಅವರ ಅನೇಕ ಚಿಂತನೆಗಳು ಇಂದಿಗೂ ನಮಗೆ ಆಶ್ಚರ್ಯ ತರುತ್ತದೆ. ಉದಾಹರಣೆಗೆ ಹೇಳುವುದಾದರೆ ಕಲ್ಯಾಣದಲ್ಲಿದ್ದ ಅನುಭವ ಮಂಟಪ. ಸಮಾಜದಲ್ಲಿನ ಎಲ್ಲ ವರ್ಗದವರು ಒಂದೆಡೆ ಸೇರಿ ವಿವಿಧ ವಿಚಾರಗಳನ್ನು ಚರ್ಚಿಸಿ ತಾವು ಬರೆದ ವಚನಗಳನ್ನು ವಾಚನ ಮಾಡಿ, ಇತರರ ವಚನಗಳನ್ನು ಕೇಳಿ ಆನಂದ ಪಡುವ ವೇದಿಕೆಯೇ ಅನುಭವ ಮಂಟಪ. ಅದನ್ನು ಆಧುನಿಕ ಶಾಸನಸಭೆಗಳಿಗೆ ಹೋಲಿಕೆ ಮಾಡುವುದುಂಟು. ಇದರ ಅಧ್ಯಕ್ಷತೆಯನ್ನು ಆ ಕಾಲದ ಮಹಾಜ್ಞಾನಿ ಅಲ್ಲಮ ಪ್ರಭುಗಳು ವಹಿಸುತ್ತಿದ್ದರು. ಈ ವೇದಿಕೆಯಲ್ಲಿ ಬಸವಣ್ಣ ನೂರಾರು ವಚನಗಳನ್ನು ಹೇಳಿರಬಹುದು. ಅದರಲ್ಲಿ ಒಂದನ್ನು ನೋಡೋಣ.

**ಲೋಕದ ಡೊಂಕ ನೀವೇಕೆ ತಿದ್ದುವಿರಿ**
**ನಿಮ್ಮ ನಿಮ್ಮ ತನುವ ಸಂತೈಸಿಕೊಳ್ಳಿ**
**ನಿಮ್ಮ ನಿಮ್ಮ ಮನವ ಸಂತೈಸಿಕೊಳ್ಳಿ**
**ನೆರೆಮನೆಯವರ ದುಃಖಕ್ಕೆ ಅಳುವವರ ಮೆಚ್ಚ**
**ಕೂಡಲಸಂಗಮದೇವಾ**

ವ್ಯಕ್ತಿ ತನ್ನ ನಡೆ ನುಡಿಗಳನ್ನು ನಿರಂತರವಾಗಿ ಪರೀಕ್ಷೆ ಮಾಡಿಕೊಳ್ಳುತ್ತಿರಬೇಕು ಎಂದು ಬಸವಣ್ಣನವರಂತೆ ಹೇಳಿದ ಮತ್ತೊಬ್ಬ ತತ್ವಜ್ಞಾನಿಯನ್ನು ಕಾಣುವುದು ತುಂಬಾ ಅಪರೂಪ. ಮಹಾತ್ಮ ಗಾಂಧೀಜಿ ಸೇರಿದಂತೆ ಆಧುನಿಕ ಚಿಂತಕರು ವ್ಯಕ್ತಿ ತನ್ನನ್ನು ಸುಧಾರಣೆ ಮಾಡಿಕೊಳ್ಳದೇ ಬೇರೆಯವರಿಗೆ ಉಪದೇಶ ಮಾಡಬಾರದು ಎಂದು ಹೇಳುತ್ತಾರೆ. ಆತ್ಮಾವಲೋಕನವುಳ್ಳ ವ್ಯಕ್ತಿ ಮಾತ್ರ ಪ್ರಾಮಾಣಿಕ ಜೀವನ ನಡೆಸಬಲ್ಲ ಎಂಬುದು ಎಲ್ಲರಿಗೂ ತಿಳಿದ ವಿಚಾರ.



ಒಳಗೊಂದು ಹೊರಗೊಂದು ನಡವಳಿಕೆಯುಳ್ಳ ವ್ಯಕ್ತಿಯಿಂದ ಸಮಾಜಕ್ಕೆ ಆಗುತ್ತಿರುವ ನಷ್ಟವನ್ನು ಬಸವಣ್ಣನವರು ಬಹು ಹಿಂದೆಯೇ ಯೋಚಿಸಿದ್ದರು ಎಂಬುದನ್ನು ಕಂಡಾಗ ನಮಗೆ ಆಶ್ಚರ್ಯವಾಗುತ್ತದೆ.

ಇಂದು ಮಹಿಳಾ ಸಬಲೀಕರಣ ಎಲ್ಲೆಲ್ಲೂ ಕೇಳಿಬರುತ್ತಿರುವ ಮಾತು. ಬಸವಣ್ಣ ಅವರು 12ನೆಯ ಶತಮಾನದಲ್ಲೇ ಸ್ತ್ರೀಗೆ ಪುರುಷರಿಗೆ ಸರಿಸಮಾನವಾದ ಸ್ಥಾನ ಕೊಟ್ಟವರು. ವೈದಿಕಸಂಸ್ಕೃತಿಯಲ್ಲಿ ಸ್ತ್ರೀಸ್ವತಂತ್ರವಾಗಿ ಯಾವುದೇ ಧಾರ್ಮಿಕವಿಧಿಗಳನ್ನು ಮಾಡುವಂತಿರಲಿಲ್ಲ. ಬಸವಣ್ಣ ಅವರು ಆಕೆಗೆ ಇಷ್ಟಲಿಂಗ ಧರಿಸಿ ಸ್ವತಂತ್ರವಾಗಿ ದೇವಾರಾಧನೆ ಮಾಡಲು ಅವಕಾಶ ಮಾಡಿಕೊಟ್ಟರು. 'ಹೆಣ್ಣು ಮಾಯೆಯಲ್ಲ, ಹೆಣ್ಣು ರಾಕ್ಷಿಸಿಯಲ್ಲ, ಹೆಣ್ಣು ಕಪಿಲಸಿದ್ಧ ಮಲ್ಲಿಕಾರ್ಜುನನ ಸಿದ್ಧರೂಪ' ಎಂದು ಆ ವಚನಕಾರರು ಬರೆಯುವಂತೆ ಬಸವಣ್ಣ ಅವರು ಪ್ರೇರಣೆ ನೀಡಿದ್ದರು. ಇಂತಹ ಬದಲಾವಣೆ ಭಕ್ತಿಭಂಡಾರಿ ಬಸವಣ್ಣ ಅವರ ನಾಯಕತ್ವದಿಂದ ಮಾತ್ರ ಸಾಧ್ಯವಾಗಿದೆ. ಬಸವಣ್ಣ ಅವರ ಸಮಕಾಲೀನಳಾಗಿದ್ದ ಅಕ್ಕಮಹಾದೇವಿ ಕನ್ನಡದ ಮೊದಲ ಕವಯತ್ರಿ. ಆಕೆಯೇ ಸ್ತ್ರೀಸ್ವಾತಂತ್ರ್ಯದ ಬೀಜ ನೆಟ್ಟ ಕ್ರಾಂತಿಕಾರಿ ಮಹಿಳೆ. ಬಸವಣ್ಣ ಅವರ ಮಡದಿ ನೀಲಾಂಬಿಕೆ ಅಧ್ಯಾತ್ಮ ಸಾಧನೆಯಲ್ಲಿ ಬಸವಣ್ಣ ಅವರನ್ನು ಮೀರಿಸಿದ್ದಳೆಂದು ಅವಳ ವಚನಗಳೇ ಸಾಕ್ಷಿ ನುಡಿಯುತ್ತವೆ. ಬಸವಣ್ಣ ಅವರ ಪ್ರಕಾರ ಯಾವುದೇ ಕ್ಷೇತ್ರದಲ್ಲಿ ಸಾಧನೆಯಾಗಬೇಕಾದರೆ ಸ್ತ್ರೀ–ಪುರುಷರು ಸಮಾನರು ಎಂಬ ಮನೋಧರ್ಮ ಬೆಳೆಯಬೇಕು. ಈ ತತ್ವ ಇಂದು ವಿಶ್ವದ ಎಲ್ಲೆಡೆ ಮಾನ್ಯವಾಗಿದೆ. 12ನೆಯ ಶತಮಾನದಲ್ಲೇ ಬಸವಣ್ಣ ಅವರಿಗೆ ಈ ತತ್ವದಲ್ಲಿ ನಂಬಿಕೆ ಮತ್ತು ಬದ್ಧತೆಯಿತ್ತು ಎಂಬುದು ಕನ್ನಡಿಗರ ಅಭಿಮಾನಕ್ಕೆ ಕಾರಣವಾಗುವ ಸಂಗತಿಯಾಗಬೇಕು.


ಭಕ್ತಿಭಂಡಾರಿ ಬಸವಣ್ಣ ಅವರ ಅನೇಕ ಕೊಡುಗೆಗಳಲ್ಲಿ ಎರಡನ್ನು ಮಾತ್ರ ಈ ಸಂದರ್ಭದಲ್ಲಿ ವಿಶೇಷವಾಗಿ ಹೇಳಬೇಕಾಗಿದೆ. ಆ ಎರಡು ತತ್ವಗಳು ಸಮಾಜದ ಅಭಿವೃದ್ಧಿಗೆ ಪೂರಕವಾಗಿದೆ. ಮೊದಲನೆಯದು ಕಾಯಕ. ಎರಡನೆಯದು ದಾಸೋಹ. ಎರಡು ತತ್ವಗಳು ಆಧುನಿಕ ಸಮಾಜದ ಮುಖ್ಯ ಆರ್ಥಿಕ ಸಿದ್ಧಾಂತಗಳೆಂದು ಪ್ರಸಿದ್ಧವಾಗಿವೆ. ಬಸವಣ್ಣ ಅವರ ಪ್ರಕಾರ 'ದುಡಿಮೆಯೇ ದೇವರಲ್ಲ, ದುಡಿಯುವವನೇ ದೇವರು.' ಸರ್ವರಿಗೂ ಸಮಪಾಲು, ಸರ್ವರಿಗೂ ಸಮಬಾಳು ಅವರ ಬದುಕಿನ ಸೂತ್ರವಾಗಿತ್ತು. ವ್ರತ ನಿಯಮಾಚರಣೆಗಿಂತ ಕಾಯಕನಿಷ್ಠೆ ಶ್ರೇಷ್ಠ ಎಂದು ಆ ಕಾಲದ ಶರಣರು ನಂಬಿದ್ದರು. ಶ್ರೇಷ್ಠ ಶರಣರಿಗೆ ಕಾಯಕಕ್ಕಿಂತ ಯಾವುದೇ ವ್ರತನಿಯಮಗಳಿರಲಿಲ್ಲ. ಅಂದು ಭಾರತದಲ್ಲಿ ಕೆಳವರ್ಗದ ಜನರು ನಿರಂತರವಾಗಿ ದುಡಿಯುತ್ತಿದ್ದರು. ಕೆಲವೇ ಜನ ಅವರ ಶ್ರಮವನ್ನು ಉಣ್ಣುತ್ತಾ ಕುಳಿತಿರುತ್ತಿದ್ದರು. ಇಂತಹ ಸಂದರ್ಭದಲ್ಲಿ ಬಸವಣ್ಣ ಅವರು ಸಮಾಜವಾದ ಸಿದ್ಧಾಂತದ ಪ್ರಕಾರ ಎಲ್ಲರೂ ದೈಹಿಕ ಶ್ರಮಪಟ್ಟು ದುಡಿದು ತಿನ್ನಬೇಕು ಎಂಬ ಸಂದೇಶ ಕೊಟ್ಟಿದ್ದರು. ಇದು ಅವರ ಕಾಲಕ್ಕಿಂತ ಬಹಳ ಮುಂದಿನ ಶತಮಾನದ ಚಿಂತನೆಯಾಗಿತ್ತು. ಕಾಯಕದ ನಂತರ ಬಸವಣ್ಣ ಅವರು ಹೇಳಿದ ಮತ್ತೊಂದು ಸಿದ್ಧಾಂತ ದಾಸೋಹ. ಶಿವಶರಣರ ಪ್ರಕಾರ ದಾಸೋಹ ಎಂದರೆ ಹಂಚಿಕೊಂಡು, ಸಮಾನವಾಗಿ ಕುಳಿತು ತಿನ್ನುವುದು ಎಂದರ್ಥ. ಅದನ್ನು ಬಸವಣ್ಣ ಅವರು ತಮ್ಮ ವಚನವೊಂದರಲ್ಲಿ ಹೇಳಿದ್ದಾರೆ.

**ಕಾಗೆ ಒಂದಗುಳ ಕಂಡರೆ ಕರೆಯದೆ**
**ತನ್ನ ಬಳಗವನು?**
**ಕೋಳಿ ಒಂದು ಗುಟುಕು ಕಂಡರೆ ಕೂಗಿ**
**ಕರೆಯದೆ ತನ್ನ ಕುಲವೆಲ್ಲವ?**
**ಕಾಗೆ ಕೋಳಿಗಿಂತ ಕರಕಷ್ಟ**
**ಕೂಡಲಸಂಗಮದೇವಾ**

ತಾನು ಸಂಪಾದಿಸಿದ ಸಂಪತ್ತು ತನಗೆ ಮತ್ತು ತಮ್ಮ ಕುಟುಂಬಕ್ಕೆ ಎನ್ನುವ ಸ್ವಾರ್ಥ ಸಮಾಜದಲ್ಲಿನ ಶ್ರೀಮಂತರಿಗಿರುತ್ತದೆಯೋ ಅಲ್ಲಿಯ ತನಕ ಮಾನವ ಸಮಾಜದಲ್ಲಿ ಹಸಿವು ನಿರಂತರವಾಗಿರುತ್ತದೆ. ಹಸಿದ ವ್ಯಕ್ತಿಗೆ ಅನ್ನಕ್ಕಿಂತ ದೊಡ್ಡ ದೈವ ಯಾವುದೂ ಇಲ್ಲ. ನಾಗರಿಕ ಸಮಾಜದ ಲಕ್ಷಣ ಅಲ್ಲಿರುವ ಎಲ್ಲ ಮಾನವಜೀವಿಗಳು ನೆಮ್ಮದಿಯಿಂದ ಎರಡುಹೊತ್ತು ಊಟ ಮಾಡುವುದೇ ಆಗಿರುತ್ತದೆ. ಭಾರತದಂತಹ ದೇಶದಲ್ಲಿ ಇಂದಿಗೂ ಶೇಕಡ 30ರಷ್ಟು ಜನರಿಗೆ ಎರಡು ಹೊತ್ತು ಊಟ ಇಂದಿಗೂ ದೊರೆಯುತ್ತಿಲ್ಲ. ಇಂದಿಗೂ ನಗರ ಪ್ರದೇಶದಲ್ಲಿ ಕುಟುಂಬವೊಂದರ ಪ್ರತಿದಿನದ ಆದಾಯ 33ರೂ.ಗಳಿದ್ದರೆ ಗ್ರಾಮೀಣ ಪ್ರದೇಶದಲ್ಲಿ ಅದು 21.50ರೂ.ಗಳಿಗೆ ಸೀಮಿತವಾಗಿದೆ. ಇದರಿಂದ ಜೀವನ ನಿರ್ವಹಣೆ ಹೇಗೆ ಸಾಧ್ಯ. ಇನ್ನು ಕೆಲವರ ಆದಾಯ ದಿನಕ್ಕೆ ಕೋಟಿರೂ.ಗಳನ್ನು ಮೀರಿದೆ. ಇಂತಹ ಅಸಮಾನತೆಯ ನಿವಾರಣೆಗೆ ದಾಸೋಹ ಪರಿಕಲ್ಪನೆ ಉತ್ತಮ ಪರಿಹಾರವಾಗಿದೆ. ದೇಶದಲ್ಲಿ ಆಹಾರ ಪದಾರ್ಥಗಳ ಕೊರತೆಯಿಲ್ಲ. ದಾಸೋಹ ತತ್ವವನ್ನು ನಿಷ್ಠೆಯಿಂದ ಅನುಷ್ಠಾನ ಮಾಡಿದರೆ ಹಂಚಿ ತಿನ್ನುವ ಅಭ್ಯಾಸ ರೂಢಿಗತವಾಗಿ ಸಮೂಹ ಚಿಂತನೆಯ ಪ್ರಜ್ಞೆ ಜಾಗೃತವಾಗುತ್ತದೆ.

ಭಕ್ತಿಭಂಡಾರಿ ಬಸವಣ್ಣ ಅವರ ನೆನಪು ಜನತೆಯಲ್ಲಿ ಕಾಯಕ ಮತ್ತು ದಾಸೋಹ ಪ್ರಜ್ಞೆಗಳು ಜಾಗೃತವಾಗುವಂತೆ ಆಗಲಿ ಎನ್ನುವ ಆಶಯ ನನ್ನದು.

■ **ನಿರೂಪಣೆ: ಎನ್.ಭಾರತಿ**




**ಪತ್ರಿಕೆಯ ಬಳಗ**

ಪ್ರಧಾನ ಸಂಪಾದಕರು
**ಡಾ. ಎಂ. ಆರ್. ಹುಲಿನಾಯ್ಕರ್**

ಗೌರವ ಸಂಪಾದಕರು
**ಡಾ. ಕೆ.ಆರ್.ಕಮಲೇಶ**

ಕಾರ್ಯನಿರ್ವಾಹಕ ಸಂಪಾದಕರು
**ಡಾ. ರಮಣ ಎಂ. ಹುಲಿನಾಯ್ಕರ್**

ಸಂಪಾದಕರು
**ಅಂಬಿಕಾ ಎಂ. ಹುಲಿನಾಯ್ಕರ್**

ಸಂಯೋಜಕ ಸಂಪಾದಕರು
**ಎಂ.ಎಸ್.ಪಾಟೀಲ್**

ಸಲಹಾ ಸಂಪಾದಕರು
**ಎನ್.ಭಾರತಿ**

ಸಂಪಾದಕ ಮಂಡಲಿ
**ಡಾ. ಭವಾನಿ ಸ್ಟಾಲಿನ್**
**ಡಾ. ಮನೋನ್ಮಣಿ ಎಂ.ಎಚ್**
**ಡಾ. ಲಾವಣ್ಯ ರಮಣ**

ಸಹಾಯಕ ಸಂಪಾದಕರು: **ಎನ್. ಆನಂದ** ಪುಟ ವಿನ್ಯಾಸ: **ಸುಮಾ ಸಾಗರ್**

# ರಕ್ತನಾಳ ಶಸ್ತ್ರಚಿಕಿತ್ಸೆ ಬಗ್ಗೆ ವಿದ್ಯಾರ್ಥಿಗಳು ಹೆಚ್ಚು ಕಲಿಯಲು ಅವಕಾಶ

ತುಮಕೂರಿನ ಶಿರಾರಸ್ತೆಯ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ ಶಸ್ತ್ರಚಿಕಿತ್ಸಾ ವಿಭಾಗದಿಂದ "ರಕ್ತನಾಳಕ್ಕೆ ಸಂಬಂಧಪಟ್ಟ ಆಧುನಿಕ ಶಸ್ತ್ರಚಿಕಿತ್ಸೆಯ ತಂತ್ರಗಾರಿಕೆ" (Out Look on Vascular Surgery) ಎಂಬ ವಿಷಯದ ಬಗ್ಗೆ ಒಂದು ದಿನದ ಸಿ.ಎಂ.ಇ. ಕಾರ್ಯಾಗಾರವನ್ನು ಮಾ.10ರಂದು ಶ್ರೀದೇವಿ ಆಸ್ಪತ್ರೆಯ ಆಡಿಟೋರಿಯಂ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಅದರ ಅಧ್ಯಕ್ಷತೆ ವಹಿಸಿ ಡಾ.ಎಂ.ಆರ್. ಹುಲಿನಾಯ್ಕರ್ ಅವರು "ಇತ್ತೀಚಿನ ದಿನಗಳಲ್ಲಿ ರಕ್ತನಾಳಗಳ ಶಸ್ತ್ರಚಿಕಿತ್ಸೆಯೂ ಅತಿ ಸೂಕ್ಷ್ಮವಾಗಿದ್ದು ಇದರ ಪ್ರಯೋಜನವನ್ನು ವೈದ್ಯಕೀಯ ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಹೆಚ್ಚು ಕಲಿಯಲು ಅಗತ್ಯವಿರುತ್ತದೆ.

ಈ ನಿಟ್ಟಿನಲ್ಲಿ ನುರಿತ ತಂತ್ರಜ್ಞರು ಶಸ್ತ್ರಚಿಕಿತ್ಸೆ ಕೊಠಡಿಯಲ್ಲಿ ಉತ್ತಮ ತರಬೇತಿಯನ್ನು ಕೊಡುತ್ತಾರೆ.. ಉದಾಹರಣೆಗೆ ರಸ್ತೆ ಅಪಘಾತಗಳಲ್ಲಿ ರಕ್ತನಾಳಗಳಿಗೆ ತೊಂದರೆ ಆಗುವುದು ಸಹಜವಾಗಿರುತ್ತದೆ. ಜೊತೆಗೆ ಕೆಲವು ರಕ್ತನಾಳಗಳ ಕಾಯಿಲೆಯನ್ನು ದೈನಂದಿನ ಜೀವನ ಶೈಲಿಯನ್ನು ಬದಲು ಮಾಡಿಕೊಳ್ಳುವುದರಿಂದ ತಡೆಗಟ್ಟಬಹುದಾಗಿದೆ. ಧೂಮಪಾನ, ಮದ್ಯಪಾನ ಚಟಗಳಿಗೆ ಒಳಗಾದ ವ್ಯಕ್ತಿಗಳು ರಕ್ತನಾಳಗಳ ಕಾಯಿಲೆಗಳಿಗೆ ತುತ್ತಾಗುವುದು ಸರ್ವೆ ಸಾಮಾನ್ಯವಾಗಿರುತ್ತದೆ. ಈಗ ರಕ್ತನಾಳದ ತೊಂದರೆಯಿರುವ ರೋಗಿಗಳು ಹೆಚ್ಚಿಗೆ ಬರುತ್ತಿದ್ದಾರೆ. ಆದ್ದರಿಂದ ಈ ಶಸ್ತ್ರಚಿಕಿತ್ಸಾ ವಿಭಾಗವು ಉತ್ತಮ ಚಿಕಿತ್ಸೆ ನೀಡಲು ಬೇಕಾದ ಸುಸಜ್ಜಿತ ಶಸ್ತ್ರಚಿಕಿತ್ಸೆ ಕೊಠಡಿಗಳು, ತಂತ್ರಜ್ಞರು ಮತ್ತು ಸಿಬ್ಬಂದಿಗಳನ್ನು ನಮ್ಮ ಸಂಸ್ಥೆ ನಿಯೋಜಿಸಿದೆ" ಎಂದರು.




ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಆರ್ ಹುಲಿನಾಯ್ಕರ್, ಶ್ರೀಸಿದ್ಧಗಂಗಾ ವೈದ್ಯಕೀಯ ಕಾಲೇಜಿನ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಡಾ.ಎನ್.ಚಂದ್ರಶೇಖರ್, ಡಾ.ಶಾಂತಕುಮಾರ್, ಡಾ.ಪ್ರಶಾಂತ್, ಡಾ.ಪ್ರಭಾಕರ್, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ.ಎಲ್.ಹರೇಂದ್ರಕುಮಾರ್, ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ.ಮೋಹನ್‌ಕುಮಾರ್, ಡಾ.ಎಲ್.ನರೇಂದ್ರಕುಮಾರ್, ಡಾ.ಎಂ.ಎಸ್.ಸಂಗೊಳ್ಳಿ, ಡಾ.ಎಲ್.ಚೇತನ್, ಡಾ.ಕೆ.ಎಂ.ಅಮಿತ್, ಡಾ.ಆರ್.ವಿಕ್ರಮ್, ಡಾ.ಆರ್.ಸಂತೋಷ್‌ಕುಮಾರ್‌ರಾಜಪೂತ್, ವೈದ್ಯರಾದ ಡಾ.ಬಿ.ಸುಷ್ಮಾ ಹಾಗೂ ವಿವಿಧ ವಿಭಾಗ ಮುಖ್ಯಸ್ಥರು ಬೋಧಕ ಬೋಧಕೇತರ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಕಾರ್ಯಕ್ರಮದಲ್ಲಿ ಮುಖ್ಯಅತಿಥಿಗಳಾಗಿ ಆಗಮಿಸಿದ್ದ ಶ್ರೀಸಿದ್ಧಗಂಗಾ ವೈದ್ಯಕೀಯ ಕಾಲೇಜಿನ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಡಾ.ಎನ್.ಚಂದ್ರಶೇಖರ್‌ರವರು ಮಾತನಾಡುತ್ತಾ "ಸ್ನಾತಕೋತ್ತರ ವಿದ್ಯಾರ್ಥಿಗಳು ತಮ್ಮ ಅಧ್ಯಾಪಕರ ಮೂಲಕ ಪಠ್ಯ ವಿಷಯಗಳನ್ನು ಕಲಿಯುವುದರ ಜೊತೆ ಇಂತಹ ಸೆಮಿನಾರ್‌ಗಳಲ್ಲಿ ತಜ್ಞರ ಜೊತೆ ಸಂವಾದ ನಡೆಸಿ ಶಸ್ತ್ರಚಿಕಿತ್ಸೆಯ ಕೌಶಲ್ಯಗಳನ್ನು ಕರಗತವಮಾಡಿಕೊಳ್ಳುವುದು ಅತ್ಯಂತ ಅಗತ್ಯವಾದ ವಿಚಾರ. ವೈದ್ಯಕೀಯ ಶಿಕ್ಷಣ ಎಂಬುದು ಕಲಿಕೆಯ ನಿರಂತರ ಪ್ರಕ್ರಿಯೆ. ಇಲ್ಲಿ ಯಾವಾಗಲೂ ಕಲಿಯುತ್ತ ಸಾಗುವುದು ಮುಖ್ಯ. ಶ್ರೀದೇವಿ ವೈದ್ಯಕೀಯ ಕಾಲೇಜಿನವರು ರಕ್ತನಾಳಕ್ಕೆ ಸಂಬಂಧಪಟ್ಟ ಆಧುನಿಕ ಶಸ್ತ್ರಚಿಕಿತ್ಸೆ ಬಗ್ಗೆ ಸಿ.ಎಂ.ಇ. ಕಾರ್ಯಾಗಾರ ಮಾಡಿರುವುದು ತುಮಕೂರಿನಲ್ಲಿ ಮೊದಲ ಬಾರಿಗೆ ಎಂದು ಹೆಮ್ಮೆಯ ವಿಷಯವಾಗಿದೆ. ಅದಕ್ಕಾಗಿ ಅವರನ್ನು ಅಭಿನಂದಿಸುತ್ತೇನೆ" ಎಂದರು. ಕಾರ್ಯಕ್ರಮದಲ್ಲಿ ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಆರ್ ಹುಲಿನಾಯ್ಕರ್‌ರವರು ಮಾತನಾಡುತ್ತಾ "ವೈದ್ಯಕೀಯವಿಜ್ಞಾನದ ಶಸ್ತ್ರಚಿಕಿತ್ಸಾ ವಿಭಾಗವು ಆಧುನಿಕ ವೈದ್ಯಕೀಯ ಉಪಕರಣಗಳನ್ನು ಉಪಯೋಗಿಸಿಕೊಂಡು ಅತಿ ಅದ್ಭುತ ಚಿಕಿತ್ಸಾ ಪದ್ಧತಿಗಳನ್ನು ಅಳವಡಿಸಿಕೊಂಡಿದೆ. ಇದರ ಪ್ರಯೋಜನವನ್ನು ರೋಗಿಗಳು ಪಡೆಯುತ್ತಿದ್ದಾರೆ. ನಮ್ಮ ಕಾಲೇಜಿನಲ್ಲಿ ಶಸ್ತ್ರಚಿಕಿತ್ಸಾ ತಜ್ಞರಿಗಾಗಿ ವಿಶೇಷವಾದ ಸ್ಕಿಲ್‌ಲ್ಯಾಬ್‌ನ್ನು ಸ್ಥಾಪಿಸಲಾಗಿದೆ. ಇದರ ಉಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕು" ಎಂದು ತಿಳಿಸಿದರು.

ಕಾರ್ಯಕ್ರಮದ ಮುಖ್ಯಅತಿಥಿಗಳಾಗಿ ಆಗಮಿಸಿದ್ದ ಭಾರತಿ ಆಸ್ಪತ್ರೆಯ ಮುಖ್ಯಸ್ಥರಾದ ಡಾ.ಶಾಂತಕುಮಾರ್, ಡಾ.ಪ್ರಶಾಂತ್, ಡಾ.ಪ್ರಭಾಕರ್ ಆಗಮಿಸಿದ್ದರು. ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಮತ್ತು ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯರವರು ಕಾರ್ಯಕ್ರಮಕ್ಕೆ ಶುಭ ಕೋರಿದರು.

ಇದೇ ಸಂದರ್ಭದಲ್ಲಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಎಂ.ಎಲ್.ಹರೇಂದ್ರಕುಮಾರ್, ಶ್ರೀದೇವಿ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ.ಕೆ. ಮೋಹನ್‌ಕುಮಾರ್, ಶ್ರೀದೇವಿ ವೈದ್ಯಕೀಯ ಉಪಅಧೀಕ್ಷಕರಾದ ಡಾ.ಚೆನ್ನಮಲ್ಲಯ್ಯ, ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ಸರ್ಜಿಕಲ್ ಗ್ಯಾಸ್ಟ್ರೋ ಎಂಟರಾಲಜಿಸ್ಟ್ ವಿಭಾಗದ ಮುಖ್ಯಸ್ಥರಾದ ಡಾ.ಎಂ.ಹೆಚ್.ಮನೋಜ್ಞಣಿ, ಶ್ರೀದೇವಿ ಶಸ್ತ್ರಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಡಾ.ಎಲ್.ನರೇಂದ್ರಕುಮಾರ್, ಶಸ್ತ್ರಚಿಕಿತ್ಸಾ ವೈದ್ಯ ತಂಡವಾದ ಡಾ.ಎಂ.ಎಸ್.ಸಂಗೊಳ್ಳಿ, ಡಾ.ಎಲ್. ಚೇತನ್, ಡಾ.ಕೆ.ಎಂ.ಅಮಿತ್, ಡಾ.ಆರ್.ವಿಕ್ರಮ್, ಡಾ.ಆರ್.ಸಂತೋಷ್‌ಕುಮಾರ್ ರಾಜಪೂತ್, ವೈದ್ಯರಾದ ಡಾ.ಬಿ.ಸುಷ್ಮಾ, ಹಾಗೂ ವಿವಿಧ ವಿಭಾಗ ಮುಖ್ಯಸ್ಥರು ಬೋಧಕ ಬೋಧಕೇತರ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

## ವಿಶ್ವ ಆರೋಗ್ಯ ದಿನಾಚರಣೆ

# ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ವಹಿಸೋಣ...



■ ಎನ್.ಆನಂದ್

ಏಪ್ರಿಲ್7 ವಿಶ್ವ ಆರೋಗ್ಯ ದಿನಾಚರಣೆ. ಇಂತಹ ಸಂದರ್ಭದಲ್ಲಿ ನಾಗರಿಕರು ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸುವುದು ಅತಿ ಮುಖ್ಯ. ಆರೋಗ್ಯವೇ ಭಾಗ್ಯ. ಇದಕ್ಕಿಂತ ಮಿಗಿಲಾದುದು ಯಾವುದೂ ಇರಲಾರದು, ಸದೃಢ ಆರೋಗ್ಯವನ್ನು ಕಾಪಾಡಿಕೊಳ್ಳುವುದು ಒಂದು ಕಲೆ, ನಮ್ಮ ಜೀವನ ಶೈಲಿ, ಆಹಾರ ಪದ್ಧತಿ, ವೈಯಕ್ತಿಕ ಅಭ್ಯಾಸ ಇತ್ಯಾದಿ ಎಲ್ಲವು ಆರೋಗ್ಯದ ಮೇಲೆ ನೇರ ಅಥವಾ ಪರೋಕ್ಷ ಪರಿಣಾಮ ಬೀರುತ್ತದೆ. ವ್ಯಕ್ತಿ ಅನಾರೋಗ್ಯಕ್ಕೆ ತುತ್ತಾದಾಗ ಆತನಿಗೆ ಆರೋಗ್ಯದ ಬಗ್ಗೆ ಹೆಚ್ಚು ಕಾಳಜಿ ಬರುವುದು ಸಹಜ. ಕಾಯಿಲೆ ಬರುವ ಮೊದಲೇ ಎಚ್ಚರ ವಹಿಸಿ ಕಾಯಿಲೆಯನ್ನು ತಡೆಗಟ್ಟಲು ಜಾಗೃತರಾಗುವುದು ಅತಿ ಮುಖ್ಯವಾಗಿದೆ.

ಮನುಷ್ಯ ಉತ್ತಮ ರೀತಿಯಲ್ಲಿ ಬಾಳ್ವೆ ನಡೆಸಲು ಆರೋಗ್ಯ ಅತ್ಯಗತ್ಯವಾಗಿದೆ. ದೈಹಿಕ ಮತ್ತು ಮಾನಸಿಕ ಆರೋಗ್ಯಗಳೆರಡನ್ನು ಕಾಪಾಡಿಕೊಳ್ಳಲು ಜನಸಾಮಾನ್ಯರಲ್ಲಿ ಅರಿವು ಮೂಡಿಸಲು ಪ್ರತಿವರ್ಷ ವಿಶ್ವ ಆರೋಗ್ಯ ಸಂಸ್ಥೆ ಏಪ್ರಿಲ್7 ರಂದು 'ವಿಶ್ವ ಆರೋಗ್ಯ ದಿನ'ವನ್ನಾಗಿ ಆಚರಿಸಲು ಕರೆ ಕೊಟ್ಟಿದೆ.

ವಿಶ್ವ ಆರೋಗ್ಯ ಸಂಸ್ಥೆ ಮೊದಲ ಬಾರಿಗೆ 1950 ಏಪ್ರಿಲ್7 ರಂದು "ವಿಶ್ವ ಆರೋಗ್ಯ ದಿನ"ವನ್ನು ಆಚರಿಸಲು ಸೂಚಿಸಿತ್ತು. ಅಲ್ಲಿಂದ ಪ್ರತಿ ವರ್ಷವು ಏ7 ರಂದು ಆರೋಗ್ಯ ರಕ್ಷಣೆ ಮತ್ತು ಅದರ ಕಾಳಜಿ ಕುರಿತಂತೆ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ಹತ್ತು ಹಲವು ಕಾರ್ಯಕ್ರಮಗಳನ್ನು ವಿಶ್ವದ ಎಲ್ಲಾ ಕಡೆ ಆಚರಿಸಿಕೊಂಡು ಬರಲಾಗುತ್ತಿದೆ.

ಆರೋಗ್ಯ ರಕ್ಷಣೆಯ ವಿಚಾರದಲ್ಲಿ ಜನರಿಗೆ ಮಾರ್ಗದರ್ಶನ ನೀಡುವುದರ ಜೊತೆಗೆ ನೈರ್ಮಲ್ಯಯುಕ್ತ ಸಮಾಜಕ್ಕೆ ಅಗತ್ಯವಾದ ನೀರಿನ ಸಂರಕ್ಷಣೆ, ಪರಿಸರ ಸ್ವಚ್ಛತೆ ಹಾಗೂ ಆಯಾಯ ಕಾಲಕ್ಕೆ ತೆಗೆದುಕೊಳ್ಳಬೇಕಾದ ಔಷಧಗಳು, ಆರೋಗ್ಯ ಸಮಸ್ಯೆ ಬಂದಾಗ ತ್ವರಿತ ತಪಾಸಣೆ ಮತ್ತು ಚಿಕಿತ್ಸೆ ಮುಂತಾದ ವಿಷಯಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲಾಗುತ್ತದೆ.

ವಿಶ್ವ ಸಂಸ್ಥೆಯು ಆರೋಗ್ಯ ಎಂದರೆ 'ರೋಗವಿಲ್ಲದಿರುವುದೇ ಆರೋಗ್ಯ' ಎಂಬ ವ್ಯಾಖ್ಯಾನ ನೀಡಿತ್ತು. ಈಗ ಬದಲಾದ ಪರಿಸ್ಥಿತಿ ಮತ್ತು ಕಾಲಘಟ್ಟದಲ್ಲಿ ಈ ವ್ಯಾಖ್ಯಾನ ತನ್ನ ಅರ್ಥವನ್ನು ಕಳೆದುಕೊಂಡಿದೆ. ಯಾಕೆಂದರೆ ಈಗ ದುರ್ಬಿನು ಹಾಕಿ ಹುಡುಕಿದರೂ ನಮಗೆ ಆರೋಗ್ಯವಂತ ವ್ಯಕ್ತಿ ಸಿಗುವುದು ತುಂಬ ಕಷ್ಟವಾಗಿದೆ. ಒಂದು ವೇಳೆ ವ್ಯಕ್ತಿ ಪರಿಪೂರ್ಣವಾಗಿ ಆರೋಗ್ಯವಂತ ಎಂದು ಪ್ರಮಾಣೀಕರಿಸಬೇಕಾದರೆ ಆತ ದೈಹಿಕ, ಮಾನಸಿಕ ಮತ್ತು ಸಾಮಾಜಿಕವಾಗಿ ಆರೋಗ್ಯವಂತನಾಗಿರಬೇಕಾಗುತ್ತದೆ.

ಈಗಿನ ನಮ್ಮ ಜೀವನ ಶೈಲಿ, ಆಹಾರ ಪದ್ಧತಿ. ಉಸಿರಾಡುವ ಕಲುಷಿತ ಗಾಳಿ, ದಿನನಿತ್ಯದ ಕೆಲಸದ ಒತ್ತಡ ಮತ್ತು ವಿಷಪೂರಿತ ಪರಿಸರದಿಂದಾಗಿ ಪರಿಪೂರ್ಣ ಆರೋಗ್ಯವಂತ ವ್ಯಕ್ತಿ ಒಂದು ಲಕ್ಷಕ್ಕೆ ಒಬ್ಬರು ಸಿಕ್ಕಿದರೆ ಅದೇ ನಮ್ಮ ಪುಣ್ಯ. ಬದಲಾದ ಜೀವನ ಶೈಲಿ ಹಾಗೂ ಆಹಾರ ಪದ್ಧತಿಯಿಂದಾಗಿ ದಿನಕ್ಕೊಂದರಂತೆ ಹೊಸ ಹೊಸ ರೋಗಗಳು ಹುಟ್ಟಿಕೊಂಡು




ಮನುಕುಲವನ್ನು ಹಿಂಡಿ ಹಿಪ್ಪೆಕಾಯಿ ಮಾಡಿ ಹೈರಾಣಾಗಿಸಿದೆ. ಇದಕ್ಕೆ ಜಗತ್ತನ್ನೇ ನಡುಗಿಸಿದ ಸಾಂಕ್ರಾಮಿಕ ರೋಗ ಕೋವಿಡ್–19 ಒಂದು ಉತ್ತಮ ಉದಾಹರಣೆ. ನಾವಿನ್ನೂ ಈ ಕೋವಿಡ್–19ನಿಂದ ಸಂಪೂರ್ಣವಾಗಿ ಹೊರಬಂದಿಲ್ಲ.

ಆಧುನಿಕ ಜಗತ್ತಿನಲ್ಲಿ ಪ್ರತಿಯೊಬ್ಬರೂ ಒಂದಲ್ಲ ಒಂದು ರೋಗದಿಂದ ಬಳಲುತ್ತಿದ್ದಾರೆ, ಮಧುಮೇಹ, ರಕ್ತದೊತ್ತಡ, ಖಿನ್ನತೆ ಹೀಗೆ ಒಂದಲ್ಲ ಒಂದು ರೋಗ ಎಲ್ಲರನ್ನೂ ಕಾಡುತ್ತಿದೆ. ಹಾಗಾಗಿ ಆರೋಗ್ಯ ಎಂಬ ಪದವನ್ನು ರೋಗವಿಲ್ಲದ ದೇಹಸ್ಥಿತಿಯ ಬದಲಾಗಿ, ಜೀವನೋತ್ಸಾಹ ಎಂಬುದಾಗಿ ವ್ಯಾಖ್ಯಾನಿಸಲಾಗಿದೆ. ಮಧುಮೇಹ, ರಕ್ತದೊತ್ತಡ ಇದ್ದರೂ, ದಿನಬೆಳಗೆದ್ದು ಕೆಲಸ ಮಾಡಲು ಹುಮ್ಮಸ್ಸು ಇದ್ದಲ್ಲಿ ಆತನನ್ನು ಆರೋಗ್ಯವಂತ ವ್ಯಕ್ತಿಯೆಂದು ಕರೆಯುವ ಅನಿವಾರ್ಯತೆ ಒದಗಿದೆ.

ರೋಗವಿದ್ದರೂ, ರೋಗವನ್ನು ನಿಯಂತ್ರಣದಲ್ಲಿಟ್ಟುಕೊಂಡು ಸಮಾಜದ ಬೆಳವಣಿಗೆಗೆ ಪೂರಕವಾಗಿ ಧನಾತ್ಮಕ ಕೊಡುಗೆ ಕೊಡುವ ವ್ಯಕ್ತಿಗಳನ್ನು ಆರೋಗ್ಯವಂತ ಎಂದು ಪರಿಗಣಿಸಲಾಗುತ್ತದೆ. ಮಧುಮೇಹ ಮತ್ತು ರಕ್ತದೊತ್ತಡ ಕಾಯಿಲೆಗಳನ್ನು ಸೂಕ್ತ ಔಷಧಿ, ಆಹಾರ ಪದ್ಧತಿ ಮತ್ತು ಜೀವನ ಶೈಲಿ ಮಾರ್ಪಾಡು ಮಾಡಿಕೊಂಡು ಬದುಕಲು ಬೇಕಾದ ಎಲ್ಲಾ ವ್ಯವಸ್ಥೆಗಳು ಈಗ ಲಭ್ಯವಿರುವುದು ಸಮಾಧಾನಕರ ಅಂಶ. ಎಲ್ಲ ರೋಗಗಳನ್ನು ವೈದ್ಯರು ಔಷಧಿಯಿಂದ ಗುಣಪಡಿಸುತ್ತಾರೆ ಎಂಬ ಭ್ರಮಾಲೋಕದಿಂದ ಜನರು ಹೊರಬರಬೇಕಾಗಿದೆ. ಇಲ್ಲವಾದಲ್ಲಿ ದಿನಕ್ಕೊಂದರಂತೆ ಹೊಸ ರೋಗಗಳು ಹುಟ್ಟಿಕೊಳ್ಳುತ್ತವೆ. ಪ್ರತಿಯೊಂದು ರೋಗಕ್ಕೆ ಒಬ್ಬ ತಜ್ಞ ವೈದ್ಯರು ಹುಟ್ಟಿಕೊಳ್ಳಬಹುದೇ ಹೊರತು, ಸುಂದರ ಸುದೃಢ ಸಮಾಜದ ನಿರ್ಮಾಣ ಖಂಡಿತ ಸಾಧ್ಯವಿಲ್ಲ. ಈ ನಿಟ್ಟಿನಲ್ಲಿ ಪ್ರತಿಯೊಬ್ಬರು ತಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಲು ತಾವೇ ಪ್ರಯತ್ನ ಪಡಬೇಕು. ಪ್ರಜೆಯಾಗಿ ತಮ್ಮ ಹೊಣೆಗಾರಿಕೆ ಅರಿತುಕೊಳ್ಳಬೇಕು. ಆರೋಗ್ಯವಂತರಾಗಿರಲು ದುರಾಭ್ಯಾಸದಿಂದ ದೂರವಿರಬೇಕು. ಆಹಾರ, ವ್ಯಾಯಾಮ ಮತ್ತು ಮಾನಸಿಕ ತೃಪ್ತಿ ಆರೋಗ್ಯವನ್ನು ಕಾಪಾಡುವುದರಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

"ಎಲ್ಲರಿಗೂ ಆರೋಗ್ಯ" ಎನ್ನುವ ಧ್ಯೇಯವಾಕ್ಯವನ್ನು ವಿಶ್ವಸಂಸ್ಥೆ ನೀಡಿದೆ. ಅದಕ್ಕಾಗಿ ವಿಶ್ವ ಆರೋಗ್ಯ ದಿನಾಚರಣೆಯನ್ನು ಆಚರಿಸುತ್ತಿದ್ದೇವೆ. ಈ ಧ್ಯೇಯವಾಕ್ಯಕ್ಕೆ ನ್ಯಾಯ ಕೊಡಲಾಗಿದೆಯೇ ಎಂಬುದನ್ನು ಪ್ರತಿಯೊಬ್ಬರು ತಮ್ಮನ್ನು ತಾವು ಪ್ರಶ್ನಿಸಿಕೊಳ್ಳಬೇಕಾಗಿದೆ. ಇಲ್ಲವಾದಲ್ಲಿ ಎಲ್ಲರಿಗೂ ಆರೋಗ್ಯ ಎನ್ನುವುದು ಮರೀಚಿಕೆಯಾಗುವ ಎಲ್ಲ ಸಾಧ್ಯತೆಗಳಿವೆ. ಕೊನೆಯದಾಗಿ ವಿಶ್ವ ಆರೋಗ್ಯ ದಿನದಂದು ನಾವೆಲ್ಲರೂ ಸುಂದರ ಸುದೃಢ ಆರೋಗ್ಯವಂತ ಸಮಾಜದ ನಿರ್ಮಾಣ ಮಾಡುವ ಪ್ರತಿಜ್ಞೆ ಮಾಡೋಣ.

## ವಿಶ್ವ ಕ್ಷಯರೋಗ ದಿನಾಚರಣೆ

# ಸಿಎಂಇ ಕಾರ್ಯಕ್ರಮ

"ಆಧುನಿಕ ವಿಜ್ಞಾನ ವಿಸ್ತಾರಗೊಂಡಂತೆ ವೈದ್ಯಕೀಯ ಕ್ಷೇತ್ರವೂ ವಿವಿಧ ರೀತಿಯ ತಂತ್ರಜ್ಞಾನವನ್ನು ಅಳವಡಿಸಿಕೊಂಡು ರೋಗಿಗಳಿಗೆ ಉತ್ತಮ ಹಾಗೂ ಗುಣಾತ್ಮಕ ಸೇವೆಗಳನ್ನು ನೀಡಲಾಗುತ್ತಿದೆ. ಭಾರತವನ್ನು 2025 ರೊಳಗೆ ಕ್ಷಯ ರೋಗ ಮುಕ್ತಗೊಳಿಸಲು, ಭಾರತ ಸರ್ಕಾರವು ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿದೆ. ಕ್ಷಯ ರೋಗ ನಿವಾರಣೆಯ ಮೂಲಕ ಆರೋಗ್ಯವಂತ ಭಾರತ ನಿರ್ಮಾಣ ಮಾಡಬೇಕಾಗಿದೆ. ಕ್ಷಯ ರೋಗ ನಿವಾರಣೆಗೆ ಜನ ಜಾಗೃತಿ ಅತ್ಯಂತ ಮುಖ್ಯ ಕ್ಷಯ ಕಾಣಬರುವ ಸಂಶ್ರಯಾಸ್ಪದ ವ್ಯಕ್ತಿಗಳಿಗೆ ಉತ್ತಮ ಚಿಕಿತ್ಸೆಗಳನ್ನು ಕೊಡುವ ನವೀನ ಯೋಜನೆಯನ್ನು ಅನುಷ್ಠಾನ ಮಾಡಲಾಗುತ್ತಿದೆ" ಎಂದು ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ನಿರ್ದೇಶಕರಾದ ಡಾ.ರಮಣ್ ಆರ್ ಹುಲಿನಾಯ್ಕರ್ ಅವರು ತಮ್ಮ ಉದ್ಘಾಟನಾ ಭಾಷಣದಲ್ಲಿ ಅಭಿಪ್ರಾಯಪಟ್ಟರು.

ತುಮಕೂರು ನಗರದಲ್ಲಿರುವ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ ಶ್ರೀದೇವಿ ವೈದ್ಯಕೀಯ ಸಮುದಾಯ ವಿಭಾಗ ಮತ್ತು ಜಿಲ್ಲಾ ಕ್ಷಯರೋಗ ಕೇಂದ್ರದಿಂದ Recent Advances in TB Management ಎಂಬ ವಿಷಯದ ಬಗ್ಗೆ ಮಾ.31 ರಂದು ವೈದ್ಯಕೀಯ ಶಿಕ್ಷಣ (ಸಿ.ಎಂ.ಇ) ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಶ್ರೀದೇವಿ ವೈದ್ಯಕೀಯ ಪ್ರಾಂಶುಪಾಲರಾದ ಡಾ.ಎಂ.ಎಲ್. ಹರೇಂದ್ರಕುಮಾರ್‌ರವರು ಮಾತನಾಡುತ್ತಾ "ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಮಲ್ಟಿಡ್ರಗ್ ನಿರೋಧಕ ಟಿ.ಬಿ. (ಎಂ.ಡಿ.ಆರ್) ಚಿಕಿತ್ಸೆಗಾಗಿ ಪ್ರತ್ಯೇಕವಾರ್ಡ್‌ಗಳನ್ನು ತೆಗೆದಿದ್ದು, ಇಂತಹ ಅತ್ಯುತ್ತಮ ಸೇವೆಗಾಗಿ ರಾಜ್ಯ ಮತ್ತು ರಾಷ್ಟ್ರಗಳಿಂದ ಮೆಚ್ಚುಗೆ ಪಡೆಯಲಾಗಿದೆ" ಎಂದರು. ಇದೇ ಸಂದರ್ಭದಲ್ಲಿ ತುಮಕೂರಿನ ಜಿಲ್ಲಾ ಕ್ಷಯ ರೋಗ ಮತ್ತು ಏಡ್ಸ್ ಅಧಿಕಾರಿಗಳಾದ ಡಾ. ಸನತ್‌ಕುಮಾರ್ ಅವರು ಮಾತನಾಡುತ್ತಾ "2015ಗೆ ಹೋಲಿಸಿದರೆ ತುಮಕೂರು ಜಿಲ್ಲೆಯಲ್ಲಿ ಟಿ.ಬಿ. ರೋಗವು ಶೇಕಡ40% ಇಳಿಕೆಯನ್ನು ಕಂಡಿದೆ. 2022ನೇ ಇಸವಿಯಲ್ಲಿ ನಡೆದ 'ಟಿ.ಬಿ.ಉಪರಾಷ್ಟ್ರೀಯ ಪ್ರಮಾಣೀಕರಣ'ದ ಸ್ಪರ್ಧೆಯಲ್ಲಿ ನಾವು ಬೆಳ್ಳಿ ಪದಕವನ್ನು ಪಡೆದುಕೊಂಡಿದ್ದೇವೆ, ಇದು ನಾವು ನೀಡಿದ ಉತ್ತಮ ಚಿಕಿತ್ಸೆಗೆ ದೊರೆತ ಮನ್ನಣೆ" ಎಂದರು. ಕಾರ್ಯಕ್ರಮದಲ್ಲಿ ಶ್ರೀದೇವಿ ವೈದ್ಯಕೀಯ ಸಮುದಾಯದ ಮುಖ್ಯಸ್ಥರಾದ ಡಾ.ಎಂ.ಶಶಿಕಿರಣ್ ಅವರು 'ಕ್ಷಯ ರೋಗದ ವಿವಿಧ ಲಕ್ಷಣಗಳು, ತಡೆಗಟ್ಟುವ ರೀತಿ ಮತ್ತು ಚಿಕಿತ್ಸೆಯ ಬಗ್ಗೆ ಮಾಹಿತಿನೀಡಿದರು.



ಶ್ರೀದೇವಿ ವೈದ್ಯಕೀಯ ಸಮುದಾಯ ವಿಭಾಗ ಮತ್ತು ತುಮಕೂರಿನ ಜಿಲ್ಲಾ ಕ್ಷಯರೋಗ ಕೇಂದ್ರದಿಂದ **Recent Advances in TB Management** ಎಂಬ ವಿಷಯದ ಬಗ್ಗೆ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಚಿತ್ರದಲ್ಲಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ನಿರ್ದೇಶಕರಾದ ಡಾ.ರಮಣ್ ಆರ್ ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ಪ್ರಾಂಶುಪಾಲರಾದ ಡಾ.ಎಂ.ಎಲ್. ಹರೇಂದ್ರಕುಮಾರ್, ವೈದ್ಯಕೀಯ ಅಧೀಕ್ಷಕರಾದ ಡಾ.ಕೆ.ಮೋಹನ್‌ಕುಮಾರ್, ಡಾ.ಎಸ್.ಅನಿಲ್, ಡಾ.ಹೆಚ್.ಆರ್.ರವೀಂದ್ರರೆಡ್ಡಿ, ಡಾ.ಶಾಜೀಯಾ ಅಂಜುಮ್, ಜಿಲ್ಲಾ ಕ್ಷಯ ರೋಗ ಮತ್ತು ಏಡ್ಸ್ ಅಧಿಕಾರಿಗಳಾದ ಡಾ.ಸನತ್‌ಕುಮಾರ್, ಸಮುದಾಯದ ಮುಖ್ಯಸ್ಥರಾದ ಡಾ.ಎಂ.ಶಶಿಕಿರಣ್, ಡಾ.ಡಿ.ಕೆ. ಮಹಾಬಲರಾಜು, ಡಾ.ಕುಸುಮ, ಡಾ.ಸೌಂದರ್ಯ, ಡಾ.ಪ್ರೀತಿ ಮುಂತಾದವರು ಉಪಸ್ಥಿತರಿದ್ದರು.

ವಿಶ್ವ ಕ್ಷಯ ರೋಗ ದಿನಾಚರಣೆ –2023 ಅಂಗವಾಗಿ ಮಾರ್ಚ್ 24 ರಂದು ಪ್ರಬಂಧ ಸ್ಪರ್ಧೆ ಮತ್ತು ಕೊಲಾಜ್ ಸ್ಪರ್ಧೆಯನ್ನು ವೈದ್ಯಕೀಯ ವಿದ್ಯಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿತ್ತು. ಸ್ಪರ್ಧೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನಗಳನ್ನು ವಿಚಾರ ಸಂಕೀರ್ಣದಲ್ಲಿ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್, ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್ ಹಾಗೂ ನೇತ್ರ ತಜ್ಞರಾದ ಡಾ.ಲಾವಣ್ಯರವರು ಕಾರ್ಯಕ್ರಮಕ್ಕೆ ಶುಭ ಹಾರೈಸಿದರು.

### ಕರ್ನಾಟಕ ವೈದ್ಯಕೀಯ ಅಲ್ಟ್ರಾಸೌಂಡ್ ಸೊಸೈಟಿಯ 28ನೇ ವಾರ್ಷಿಕ ಸಮ್ಮೇಳನ

# ರೇಡಿಯಾಲಜಿ ವೈದ್ಯಕೀಯ ಸೇವೆಯ ಅವಿಭಾಜ್ಯ ಅಂಗ

"ಇಂದು ವಿಕಿರಣಶಾಸ್ತ್ರ ಮತ್ತು ರೇಡಿಯಾಲಜಿ ವೈದ್ಯಕೀಯ ಸೇವೆಯ ಅವಿಭಾಜ್ಯ ಅಂಗವಾಗಿದೆ, ಬಹಳ ಹಿಂದೆಯೇ ವೈದ್ಯಕೀಯ ಜಗತ್ತಿನಲ್ಲಿ ರೋಗ ಪತ್ತೆ ಹಚ್ಚಲು ಚಿಕಿತ್ಸೆ ನೀಡಲು ಸಹಾಯಕವಾಗಿರಲಿ ಎಂದು "ಎಕ್ಸ್ ರೇ" ಯಂತ್ರವನ್ನು ಕಂಡು ಹಿಡಿಯಲಾಯಿತು. ಅದು ವೈದ್ಯಕೀಯ ಲೋಕದಲ್ಲಿ ಮಹತ್ತರವಾದ ಪಾತ್ರ ವಹಿಸಿತ್ತು, ಆನಂತರ "ಅಲ್ಟ್ರಾಸೌಂಡ್" ಎನ್ನುವ ಕಾಯಿಲೆಯನ್ನು ಪತ್ತೆ ಹಚ್ಚು ಹೊಸ ಸಾಧನದ ಆವಿಷ್ಕಾರವಾಯಿತು. ಮುಂದೆ ವೈದ್ಯಕೀಯ ಕ್ಷೇತ್ರದಲ್ಲಿ ಹತ್ತು ಹಲವಾರು ಸಂಶೋಧನೆಗಳು ನಡೆದು ಕಾಯಿಲೆಗಳನ್ನು ಕಂಡು ಹಿಡಿಯುವುದಕ್ಕಾಗಿ ವಿವಿಧ ವೈದ್ಯಕೀಯ ಉಪಕರಣಗಳು ಬೆಳಕಿಗೆ ಬಂದವು. ಈ ಆಧುನಿಕ ವೈದ್ಯಕೀಯ ಉಪಕರಣಗಳನ್ನು ಸರಿಯಾಗಿ ಉಪಯೋಗಿಸಬೇಕಾದರೆ ತಂತ್ರಜ್ಞರ ಅವಶ್ಯಕತೆ ಹೆಚ್ಚಾಗಿರುತ್ತದೆ. ಈ ಕಾರಣಕ್ಕಾಗಿ ವೈದ್ಯಕೀಯ ಶಿಕ್ಷಣಕ್ಕೆ ವಿಶಾಲವಾದ ವ್ಯಾಪ್ತಿ ದೊರಕಿದೆ." ಎಂದು ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್ ಅವರು ಅಭಿಪ್ರಾಯಪಟ್ಟರು.

ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆ, ಕರ್ನಾಟಕ ವೈದ್ಯಕೀಯ ಅಲ್ಟ್ರಾಸೌಂಡ್ ಸೊಸೈಟಿ ಮತ್ತು ತುಮಕೂರು ರೇಡಿಯೋಲಾಜಿಸ್ಟ್ ಅಸೋಸಿಯೇಷನ್ ಅವರ ಸಂಯುಕ್ತಾಶ್ರಯದಲ್ಲಿ MUSKCON-2023 ಎಂಬ ವಿಷಯದ ಮೇಲೆ ಸಮ್ಮೇಳನವನ್ನು ಮಾರ್ಚ್ 5 ರಂದು ಶ್ರೀದೇವಿ ಆಸ್ಪತ್ರೆಯ ಅಡಿಟೋರಿಯಂ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಸೊಸೈಟಿ ಆಫ್ ಸ್ತ್ರೀರೋಗ ಮತ್ತು ಪ್ರಸೂತಿ, (Tumkur Society of Obstetrics and Gynaecology) (TSOG) ಅವರು ಸಹ ಸಮ್ಮೇಳನದ ವ್ಯವಸ್ಥೆಯ ಭಾಗವಾಗಿದ್ದರು.

ಕಾರ್ಯಕ್ರಮದಲ್ಲಿ ಬೆಂಗಳೂರಿನ ಶ್ರೀನಿವಾಸ್ ಸ್ಕ್ಯಾನಿಂಗ್ ಸೆಂಟರ್‌ನ ತಜ್ಞ ಡಾ.ಬಿ.ಎಸ್.ರಾಮುಮೂರ್ತಿರವರು ಮಾತನಾಡುತ್ತಾ "ರೇಡಿಯಾಲಿಸ್ಟ್ ವಿದ್ಯಾರ್ಥಿಗಳು ಅಲ್ಟ್ರಾಸೌಂಡ್ ವಿಷಯದಲ್ಲಿ ಉತ್ತಮ ರೀತಿಯಲ್ಲಿ ತರಬೇತಿ ಪಡೆದು ಕೌಶಲ್ಯವನ್ನು ಕರಗತ ಮಾಡಿಕೊಂಡು ಅದನ್ನು ತಮ್ಮ ವೃತ್ತಿಯ ಅವಧಿಯಲ್ಲಿ ಸದ್ಬಳಕೆ ಮಾಡಿಕೊಳ್ಳಬೇಕು" ಎಂದರು.

ರೇಡಿಯೋಲಾಜಿಸ್ಟ್ ಅಸೋಸಿಯೇಷನ್, ತುಮಕೂರು ಸೊಸೈಟಿ ಆಫ್ ಸ್ತ್ರೀರೋಗ ಮತ್ತು ಪ್ರಸೂತಿ ಅಸೋಸಿಯೇಷನ್ ವತಿಯಿಂದ ಡಾ.ಬಿ.ಎಸ್.ರಾಮುಮೂರ್ತಿ ಅವರನ್ನು ಸನ್ಮಾನಿಸಲಾಗಿತ್ತು. ಮುಖ್ಯ ಅತಿಥಿಗಳಾಗಿ ತುಮಕೂರಿನ ಹಿರಿಯ ಸಲಹೆಗಾರರಾದ ರೇಡಿಯಾಲಜಿಸ್ಟ್‌ರಾದ ಡಾ.ಕೊಟ್ಟೂರು ಅವರು ಮಾತನಾಡುತ್ತಾ "ತುಮಕೂರು ಜಿಲ್ಲೆಯಲ್ಲಿ ಪ್ರಪ್ರಥಮವಾಗಿ ಅಲ್ಟ್ರಾಸೌಂಡ್‌ನ ಸೌಲಭ್ಯ ಕೊಟ್ಟಾಗ ಜನರ ಪ್ರತಿಕ್ರಿಯೆ ಹೇಗಿತ್ತು ಎಂಬುದನ್ನು ವಿವರಿಸಿ, ಇಂದು ರೋಗಿಗಳಿಗೆ ವೈದ್ಯಕೀಯ ಉಪಕರಣ ಬಗ್ಗೆ ಜ್ಞಾನವಿರುತ್ತದೆ. ಇದನ್ನು ಬಳಸುವವರು ಉತ್ತಮ ಜ್ಞಾನ ಮತ್ತು ತರಬೇತಿಯನ್ನು ಪಡೆದುಕೊಳ್ಳದೇ ಬಂದರೆ ಅವರು ವೃತ್ತಿಯಲ್ಲಿ ಯಶಸ್ವಿಯಾಗುವುದು ಕಷ್ಟ" ಎಂದು ವಿವರಿಸಿದರು.



ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್, ಡಾ.ದುರ್ಗಾದಾಸ್, ಡಾ.ಕೊಟ್ಟೂರು, ಜೀವಾ ಎಂ.ಆರ್.ಐ ಸೆಂಟರ್‌ನ ಡಾ.ಆನಂದ್, ಬೆಂಗಳೂರಿನ ಸ್ಕ್ಯಾನಿಂಗ್ ಸೆಂಟರ್ ಹಿರಿಯ ರೇಡಿಯಾಲಜಿಸ್ಟ್‌ರಾದ ಡಾ.ನಯನ, ಡಾ.ದಿವ್ಯ, ಡಾ.ಧ್ರುವ ರಾಜಗೋಪಾಲ್, ಡಾ.ರಚಿತ್ರಾರಾಮಮೂರ್ತಿ, ಡಾ.ಪ್ರೀತಿವೆಂಕಟೇಶ್, ಡಾ.ಪ್ರಿಯಾರಂಗನಾಥ್, ಡಾ.ಶೈಲಜಾ ಮುಂತಾದರವರು ಉಪಸ್ಥಿತರಿದ್ದರು.



ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ. ವಾಣಿವೆಂಕಟರಾಮು, ಶ್ರೀದೇವಿ ಚಾರಿಟಬಲ್ ಟ್ರಸ್ಟಿಯಾದ ಶ್ರೀಮತಿ ಅಂಬಿಕಾ ಎಂ ಹುಲಿನಾಯ್ಕರ್, ಶ್ರೀದೇವಿ ಆಸ್ಪತ್ರೆಯ ನೇತ್ರ ತಜ್ಞರಾದ ಡಾ.ಲಾವಣ್ಯ, ಲೆಕ್ಕಪರಿಶೋಧಕರಾದ ರೂಪಾ, ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ನರೇಂದ್ರವಿಶ್ವನಾಥ್, ಡೀನ್ ಡಾ.ಚಂದ್ರಶೇಖರ್, ಡಾ.ಮಹೇಶ್‌ಕುಮಾರ್, ಡಾ.ಬಸವೇಶ್ ಹಾಗೂ ಬೋಧಕ ಬೋಧಕೇತರ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಮಹಿಳೆಯರು ಆರ್ಥಿಕವಾಗಿ ಸದೃಢರಾಗುವ ಅಗತ್ಯ

ಶ್ರೀದೇವಿ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಮಾರ್ಚ್ 8 ರಂದು ವಿಶ್ವ ಮಹಿಳಾ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು. ಅದರಲ್ಲಿ ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರಾದ ಶ್ರೀಮತಿ.ವಾಣಿ ವೆಂಕಟರಾಮು ಅವರು "ಇತ್ತೀಚಿನ ದಿನಗಳಲ್ಲಿ ದೇಶದ ಪ್ರಗತಿ ಮತ್ತು ಸ್ವಾವಲಂಬನೆಯಲ್ಲಿ ಮಹಿಳೆಯರ ಪಾತ್ರ ಬಹಳ ಮುಖ್ಯವಾಗಿರುತ್ತದೆ. ರಾಜ್ಯ ಹಾಗೂ ದೇಶದ ಪ್ರಗತಿಗೆ ಮಹಿಳೆಯರ ಕೊಡುಗೆ ಅಪಾರ. ಕುಟುಂಬ ನಿರ್ವಹಣೆಯಲ್ಲಿ ಪ್ರಮುಖವಾದ ಪಾತ್ರ ವಹಿಸುತ್ತಿರುವ ಮಹಿಳೆ ತಮ್ಮ ಮಕ್ಕಳಿಗೆ ಉತ್ತಮವಾದ ಭವಿಷ್ಯವನ್ನು ರೂಪಿಸಬಲ್ಲರು, ಸಮಾಜದಲ್ಲಿ ಸಾಧಿಸುವ ಚೈತನ್ಯವಾಗಿ ಮಹಿಳೆ ಹೊರಹೊಮ್ಮಿದ್ದಾಳೆ. ಆಕೆ ಆರ್ಥಿಕವಾಗಿ ಮತ್ತು ಸದೃಢತೆಯಿಂದ ಮುನ್ನಡೆದರೆ ದೇಶದ ಚಿತ್ರಣ ಬದಲಾಗವುದರಲ್ಲಿ ಯಾವುದೇ ಸಂಶಯವಿಲ್ಲ . ಪ್ರತಿಯೊಬ್ಬ ಮಹಿಳೆಯರು ಸದಾ ಕಾಲ ಕೆಲಸದ ಒತ್ತಡದಲ್ಲಿರುತ್ತಾರೆ. ಹಾಗಾಗಿ ಅವರು ತಮ್ಮ ಮಾನಸಿಕ ಮತ್ತು ದೈಹಿಕ ಆರೋಗ್ಯದ ದೃಷ್ಟಿಯಿಂದ ಸಾಹಿತ್ಯ, ಕಲೆ, ನೃತ್ಯ, ಭರತನಾಟ್ಯ ಯಾವುದಾದರೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿ ಕೊಂಡಿರಬೇಕು" ಎಂದು ಅಭಿಪ್ರಾಯಪಟ್ಟರು.

ಶ್ರೀದೇವಿ ಚಾರಿಟಬಲ್ ಟ್ರಸ್ಟಿಯಾದ ಶ್ರೀಮತಿ ಅಂಬಿಕಾ ಎಂ ಹುಲಿನಾಯ್ಕರ್‌ರವರು ಮಾತನಾಡುತ್ತಾ "ಆರೋಗ್ಯವಂತ ಭಾರತ ನಿರ್ಮಾಣವಾಗಬೇಕಾದರೆ ಮಹಿಳೆಯರಿಗೆ ಸಮಾನ ಅವಕಾಶ ಸಿಗಬೇಕು, ಆಗ ಮಾತ್ರ ದೇಶ ಪ್ರಗತಿ ಹೊಂದಲು ಸಾಧ್ಯವಾಗುತ್ತದೆ. ಭಾರತೀಯ ಹೆಣ್ಣು ಮಕ್ಕಳಿಗೆ ಸಮಾನ ಅವಕಾಶ ನೀಡಬೇಕು. ಜೊತೆಗೆ ಮಹಿಳೆಯರು ಸಿಕ್ಕ ಅವಕಾಶಗಳನ್ನು ಉಪಯೋಗಿಸಿಕೊಂಡು ಸಮಾಜ ಹಿತವನ್ನು ರಕ್ಷಿಸಬೇಕು" ಎಂದರು.

ಇದೇ ಸಂದರ್ಭದಲ್ಲಿ ಶ್ರೀದೇವಿ ಆಸ್ಪತ್ರೆಯ ನೇತ್ರ ತಜ್ಞರಾದ ಡಾ.ಲಾವಣ್ಯ ರಮಣ ಅವರು ಕೇಕ್ ಕತ್ತರಿಸುವ ಮೂಲಕ ಕಾರ್ಯಕ್ರಮವನ್ನು ಉದ್ಘಾಟಿಸಿದರು, ನಂತರ ಅವರು ಮಾತನಾಡುತ್ತ "ಮಹಿಳೆಯರು ಎಲ್ಲಾ ಪ್ರಗತಿಪರ ಕೆಲಸ ಕಾರ್ಯಗಳಿಗೆ ಸಹಕಾರ ನೀಡುತ್ತಲೇ ಬಂದಿದ್ದಾಳೆ, ಮಹಿಳೆಯರು ಸಂಸಾರವನ್ನು ಯಾವುದೇ ರೀತಿಯಾದ ಕಷ್ಟವಿಲ್ಲದೆ ನಡೆಸುತ್ತಾಳೆ ಎಂಬುದರಿಂದಲೇ ಆಕೆಯ ವ್ಯಕ್ತಿತ್ವವನ್ನು ತಿಳಿಯಬಹುದು"ಎಂದರು.

ಈ ಕಾರ್ಯಕ್ರಮಕ್ಕೆ ಶ್ರೀದೇವಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಡಾ.ಎಂ.ಆರ್.ಹುಲಿನಾಯ್ಕರ್, ಶ್ರೀದೇವಿ ವೈದ್ಯಕೀಯ ನಿರ್ದೇಶಕರಾದ ಡಾ.ರಮಣ್ ಆರ್ ಹುಲಿನಾಯ್ಕರ್, ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶ ಕರಾದ ಎಂ.ಎಸ್. ಪಾಟೀಲ್‌ರವರು ಶುಭ ಹಾರೈಸಿದ್ದರು. ಶ್ರೀದೇವಿ ಸಂಸ್ಥೆಯ ಅಡಿಮಿಷನ್ ವಿಭಾಗದ ಮುಖ್ಯಸ್ಥರಾದ ರೂಪಾ, ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ.ನರೇಂದ್ರವಿಶ್ವನಾಥ್, ಡೀನ್ ಡಾ.ಚಂದ್ರಶೇಖರ್, ಸಿವಿಲ್ ವಿಭಾಗದ ಮುಖ್ಯಸ್ಥರಾದ ಡಾ.ಮಹೇಶ್‌ಕುಮಾರ್, ಕಂಪ್ಯೂಟರ್ ಸೈನ್ಸ್ ವಿಭಾಗದ ಮುಖ್ಯಸ್ಥರಾದ ಡಾ.ಬಸವೇಶ್, ಪ್ರೊ.ತನುಜಾ, ಡಾ.ಮಂಜುಳಾ, ಪ್ರೊ.ಶೃತಿ, ಪ್ರೊ.ರೂಪಾ, ಪ್ರೊ.ದಿವ್ಯ ಹಾಗೂ ಬೋಧಕ ಬೋಧಕೇತರ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

■ ವರದಿ: ಎನ್.ಆನಂದ

# ವಿಮೋಚನೆಯ ಹರಿಕಾರರು ಡಾ.ಬಿ.ಆರ್. ಅಂಬೇಡ್ಕರ್


▪ ಬಿ.ಹೀರಾನಾಯ್ಕ್ (ಕೆ.ಎ.ಎಸ್.ನಿ)

'ಅಡುಮುಟ್ಟದ ಸೊಪ್ಪಿಲ್ಲ ಡಾ ಅಂಬೇಡ್ಕರ್ ಗುರುತಿಸದೆ ಹೋಗಿರುವ ಶೋಷಣೆಯ ಕ್ಷೇತ್ರವಿಲ್ಲ' ಎಂಬ ಮಾತು ಎಲ್ಲ ಕಡೆ ಪ್ರಸಿದ್ಧವಾಗಿದೆ. ಡಾ.ಅಂಬೇಡ್ಕರ್ ಜಗತ್ತು ಕಂಡ ಮಹಾಚಿಂತಕರು ಮತ್ತು ಸಮಾಜಸುಧಾರಕರು. ಅವರೊಬ್ಬ ಮಾನವತಾವಾದಿ. ಭಾರತದ ಸಾಮಾಜಿಕ ಸ್ವಾಸ್ಥ್ಯವನ್ನು ಏರುಪೇರಾಗಿಸಿ ಶ್ರೇಣಿಕೃತ ಸಮಾಜದ ಬೇರುಗಳನ್ನೇ ಅಲುಗಾಡಿಸಿದ ಮಹಾನ್ ವ್ಯಕ್ತಿ. ಅವರಷ್ಟು ಧೈರ್ಯಶಾಲಿಗಳು ಮತ್ತು ವ್ಯವಸ್ಥೆಯ ವಿರುದ್ಧ ಹೋರಾಡುವ ವ್ಯಕ್ತಿ ಅತ್ಯಂತ ಅಪರೂಪ ಎಂಬುದು ಎಲ್ಲರಿಗೂ ತಿಳಿದ ವಿಚಾರ. ಅನೇಕ ಸಾಮಾಜಿಕ ಸಮಸ್ಯೆಗಳಿಗೆ ಪರಿಹಾರ ಸೂಚಿಸಿ ಅದನ್ನು ಅತ್ಯಂತ ಯಶಸ್ವಿಯಾಗಿ ಅನುಷ್ಠಾನ ಮಾಡಿದ ಸಮಾಜ ಸುಧಾರಕರು. ಭಾರತೀಯ ಸಮಾಜದಲ್ಲಿ ಅನೇಕ ಸುಧಾರಕರು ಆಗಿ ಹೋಗಿದ್ದಾರೆ. ಜ್ಯೋತಿಬಾಫುಲೆ, ಮಹಾತ್ಮ ಗಾಂಧೀಜಿ ಮುಂತಾದವರು ಮಾಡದ ಮಹತ್ವದ ಕೆಲಸವನ್ನು ಡಾ.ಅಂಬೇಡ್ಕರ್ ಎಲ್ಲ ಶೋಷಿತ ಸಮಾಜಕ್ಕೆ ಮಾಡಿಕೊಟ್ಟಿದ್ದಾರೆ. ಅವರ ಕೆಲಸ ಕಾರ್ಯಗಳ ಪ್ರೇರಣೆ ಭಾರತಕ್ಕೆ ಮಾತ್ರವಲ್ಲ, ವಿಶ್ವದ ಎಲ್ಲ ಶೋಷಿತ ಸಮಾಜಕ್ಕೂ ಅನ್ವಯವಾಗುತ್ತದೆ.

ಡಾ.ಅಂಬೇಡ್ಕರ್ ಅವರದು ವಿಶಿಷ್ಟ ವ್ಯಕ್ತಿತ್ವ. ಅವರಿಗೆ ಶೋಷಿತರ ಎಲ್ಲ ಕಷ್ಟಗಳು ತಿಳಿದಿದ್ದವು. ಕಾರಣ ಅವರೇ ಶೋಷಿತ ಸಮಾಜದಲ್ಲಿ ಹುಟ್ಟಿ ಎಲ್ಲ ತರಹದ ನೋವು ಅವಮಾನಗಳನ್ನು ಅನುಭವಿಸಿದ್ದರು. ಪ್ರಕೃತಿದತ್ತವಾಗಿ ದೊರೆಯುವ ನೀರು ಕೆರೆ, ಕಾಲುವೆ, ನದಿ ಮತ್ತು ಬಾವಿಗಳಲ್ಲಿರುತ್ತದೆ. ಅದನ್ನು ನಾಯಿ, ನರಿಗಳು, ಪ್ರಾಣಿ, ಪಕ್ಷಿಗಳು ಯಾರ ಅನುಮತಿಯಿಲ್ಲದೆ ಕುಡಿಯಬಹುದಾಗಿತ್ತು. ಆದರೆ ಮನುಷ್ಯರಲ್ಲಿ ಕೆಲವರು ಅದನ್ನು ಮುಟ್ಟುವಂತಿರಲಿಲ್ಲ. ಗಾಳಿ ಮತ್ತು ಸೂರ್ಯನ ಬೆಳಕು ಎಲ್ಲರಿಗೂ ಸಮಾನವಾಗಿತ್ತು. ಮನುಷ್ಯರಾದ ಕೆಲವರು ಎಲ್ಲೆಡೆ ಹೋಗುವಂತಿರಲಿಲ್ಲ. ಪವಿತ್ರ ಸ್ಥಳ ಎಂದು ಭಾವಿಸಿದ್ದ ಜಾಗದ ಗಾಳಿ, ಬೆಳಕನ್ನು ಕೆಲವರು ಸೇವಿಸುವಂತಿರಲಿಲ್ಲ. ಇಂತಹ ಭಿನ್ನತೆಯುಳ್ಳ, ಅವಕಾಶದಿಂದ ವಂಚಿತವಾಗಿರುವ ಮೇಲು, ಕೀಳುಗಳ ತಾರತಮ್ಯವುಳ್ಳ ಸಮಾಜ ವಿಶ್ವದಲ್ಲೇ ಶ್ರೇಷ್ಠವಾಗುವುದು ಹೇಗೆ? ಇಂತಹ ಆಚರಣೆಗಳಿಗೆ ಜನ್ಮ ಕೊಟ್ಟವರು ಯಾರು? ಇದನ್ನು ಅನುಷ್ಠಾನ ಮಾಡಲು ಒತ್ತಾಯ ಮಾಡಿದವರು ಯಾರು? ಮುಂತಾದ ಪ್ರಶ್ನೆಗಳು ಬಹಳ ದಿನಗಳಿಂದ ಅನೇಕರನ್ನು ಕಾಡತೊಡಗಿದ್ದವು.

ಡಾ. ಅಂಬೇಡ್ಕರ್ ಇವುಗಳಿಗೆ ಉತ್ತರ ಕಂಡುಕೊಳ್ಳಲು ಪ್ರಾಮಾಣಿಕ ಪ್ರಯತ್ನ ನಡೆಸಿದ್ದರು. ಸಮಾಜಸುಧಾರಕರಾಗಿದ್ದ ಸಾಹು ಮಹಾರಾಜರ ಆಶೀರ್ವಾದದಿಂದ ಸಿಕ್ಕ ಅವಕಾಶವನ್ನು ಬಳಸಿಕೊಂಡು ಡಾ. ಅಂಬೇಡ್ಕರ್ ಮೊದಲಿಗೆ ತಾವು ಬೌದ್ಧಿಕವಾಗಿ ಬೆಳೆದರು. ಸಿಕ್ಕ ಸಿಕ್ಕ ಗ್ರಂಥಗಳನ್ನು ಅಧ್ಯಯನ ಮಾಡಿ ಅಪಾರ ಜ್ಞಾನರಾಶಿಯನ್ನು ತಮ್ಮದಾಗಿಸಿಕೊಂಡರು. ಡಾ. ಅಂಬೇಡ್ಕರ್ ಅವರ ಮೊದಲ ಹೋರಾಟವೇ ದಲಿತರಿಗೆ ಸಾಮಾಜಿಕನ್ಯಾಯ ಕೊಡಿಸುವುದಾಗಿತ್ತು.

ಮೇಲ್ವರ್ಗದವರ ಅಡಿಯಾಳುವಿನಂತೆ ಜೀವನ ನಡೆಸುತ್ತಿದ್ದ ದಲಿತರಲ್ಲಿ ಸ್ವಾಭಿಮಾನ ತುಂಬಿದ ಕೀರ್ತಿ ಅವರದು. ದಲಿತರು ತಮ್ಮ ಹೋರಾಟದಿಂದ ನ್ಯಾಯ ದೊರಕಿಸಿಕೊಳ್ಳಬೇಕಾದರೆ ಮೂರುಸೂತ್ರಗಳನ್ನು ಅವರು ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದು ಡಾ.ಅಂಬೇಡ್ಕರ್ ಅವರು ಹೇಳಿದ್ದಾರೆ. ಅವುಗಳೆಂದರೆ ಶಿಕ್ಷಣ, ಸಂಘಟನೆ ಮತ್ತು ಹೋರಾಟ ಇವು ಜಗತ್ತಿನ ಎಲ್ಲ ಶೋಷಿತ ಸಮುದಾಯಗಳು ಅನುಸರಿಸಬೇಕಾದ



**ಭಾರತೀಯ ಸಮಾಜದಲ್ಲಿ ಅನೇಕ ಸುಧಾರಕರು ಆಗಿ ಹೋಗಿದ್ದಾರೆ. ಜ್ಯೋತಿಬಾಫುಲೆ, ಮಹಾತ್ಮ ಗಾಂಧೀಜಿ ಮುಂತಾದವರು ಮಾಡದ ಮಹತ್ವದ ಕೆಲಸವನ್ನು ಡಾ.ಅಂಬೇಡ್ಕರ್ ಎಲ್ಲ ಶೋಷಿತ ಸಮಾಜಕ್ಕೆ ಮಾಡಿಕೊಟ್ಟಿದ್ದಾರೆ. ಅವರ ಕೆಲಸ ಕಾರ್ಯಗಳ ಪ್ರೇರಣೆ ಭಾರತಕ್ಕೆ ಮಾತ್ರವಲ್ಲ, ವಿಶ್ವದ ಎಲ್ಲ ಶೋಷಿತ ಸಮಾಜಕ್ಕೂ ಅನ್ವಯವಾಗುತ್ತದೆ.**

ಸೂತ್ರಗಳಾಗಿವೆ. ಶೋಷಿತರು ತಮ್ಮ ಕೀಳರಿಮೆಯನ್ನು ತೊರೆದು ಹೋರಾಟದ ಮಾರ್ಗ ಅನುಸರಿಸದ ಹೊರತು ಅವರಿಗೆ ನ್ಯಾಯ ದೊರೆಯುವುದಿಲ್ಲ ಎಂಬ ಭಾವನೆ ಅವರಲ್ಲಿತ್ತು.

ಏಪ್ರಿಲ್14. ಡಾ. ಅಂಬೇಡ್ಕರ್ ಅವರ ಜನ್ಮದಿನ. ಈ ವರ್ಷ ಅವರ 132ನೆಯ ಜನ್ಮದಿನ. (ಹುಟ್ಟಿದ ದಿನಾಂಕ.14.4.1891 – ಸಾವಿನ ದಿನ.6.12.1956). ಡಾ. ಅಂಬೇಡ್ಕರ್ ಅವರ ಬದುಕು ಹೋರಾಟದ ಬದುಕಾಗಿತ್ತು. ಸಾಹು ಮಹಾರಾಜ್ ಅವರಿಂದ ಪ್ರತಿಭಾವಂತ ವಿದ್ಯಾರ್ಥಿ ಎಂದು ಪರಿಗಣಿಸಲ್ಪಟ್ಟು ವಿದ್ಯಾರ್ಥಿವೇತನ ಪಡೆದು ಅಮೆರಿಕ ಮತ್ತು ಇಂಗ್ಲೆಂಡ್ ದೇಶಗಳಿಗೆ ಹೋಗಿ ಉನ್ನತ ಶಿಕ್ಷಣ ಪಡೆದಿದ್ದ ಡಾ. ಅಂಬೇಡ್ಕರ್ ತಮ್ಮ ಕಾಲದ ಬಹುದೊಡ್ಡ ವಿದ್ವಾಂಸರು. ಪ್ರಾಯಶಃ ಅಂಬೇಡ್ಕರ್ ಭಾರತೀಯ ಸಮಾಜಕ್ಕೆ ತಮ್ಮ ಶೈಕ್ಷಣಿಕ ಸಾಧನೆಯಿಂದ ಹೊಸ ಸಂದೇಶ ನೀಡಿದ್ದರು. ಅವಕಾಶ ಮತ್ತು ಪ್ರೋತ್ಸಾಹ ಕೊಟ್ಟರೆ ಯಾವುದೇ ವರ್ಗದ ಯುವಜನಾಂಗ ಜ್ಞಾನಕ್ಷೇತ್ರದಲ್ಲಿ ತಮ್ಮದೇ ಆದ ಸ್ಥಾನ ಪಡೆದುಕೊಳ್ಳಲು ಸಾಧ್ಯವಿದೆ. ವಿದ್ಯೆ ವ್ಯಕ್ತಿಯ ಸ್ವತ್ತು. ಅದು ಯಾವುದೇ ಜಾತಿ ಮತ್ತು ಧರ್ಮದ ಆಸ್ತಿಯಲ್ಲ. ಯಾರು ಕಷ್ಟಪಟ್ಟು ವ್ಯಾಸಂಗ ಮಾಡುತ್ತಾರೋ ಅಂತಹವರಿಗೆ ವಿದ್ಯೆ ಒಲಿಯುತ್ತದೆ. ಇದು ಡಾ. ಅಂಬೇಡ್ಕರ್ ಅವರ ಸಂದೇಶ.

ಡಾ.ಅಂಬೇಡ್ಕರ್ ಅವರು ಭಾರತದಲ್ಲಿ ದಲಿತರ ಶೋಷಣೆಗೆ ಮುಖ್ಯ ಕಾರಣಗಳೇನು ಎಂಬುದನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ಸತ್ಯಾಂಶವನ್ನು ಮನಗಂಡರು. ಇಲ್ಲಿನ ಜಾತಿ ವ್ಯವಸ್ಥೆ ಧರ್ಮ ಆಧಾರಿತವಾಗಿದೆ. ಭಾರತೀಯರು ಎಷ್ಟೇ ಉದಾರಿಗಳಾದರೂ ಅವರ ಧಾರ್ಮಿಕಬದ್ಧತೆ ಅವರನ್ನು ಹೊಸದನ್ನು ಒಪ್ಪಿಕೊಳ್ಳಲು ಬಿಡುವುದಿಲ್ಲ. ಭಾರತದಲ್ಲಿ ಬಹಳ ಜನರಿಗೆ ಶತಮಾನಗಳಿಂದ ವಿದ್ಯೆಯ ಗಂಧ ಗಾಳಿ ತಿಳಿದಿಲ್ಲ.

ಧರ್ಮಗ್ರಂಥಗಳಲ್ಲಿ ಎಂದೋ ಬರೆದಿರುವುದನ್ನು ಅವರು ಒಪ್ಪಿಕೊಂಡು ಅಂಧಶ್ರದ್ಧೆಯಿಂದ ಅನುಸರಿಸುತ್ತಿದ್ದಾರೆ. ಅವುಗಳ ಮೌಲ್ಯಮಾಪನ ಮಾಡುವುದಾಗಲಿ ಅಥವಾ ಅದನ್ನು ವಿರೋಧಿಸಲು ಬೇಕಾದ ಚಿಂತನಶಕ್ತಿಯನ್ನು ಭಾರತೀಯರು ಕಳೆದುಕೊಂಡಿದ್ದಾರೆ.

ಇಂತಹವರ ಜಾಗೃತಿಗೆ ಆಧುನಿಕ ಶಿಕ್ಷಣವನ್ನು ಎಲ್ಲರಿಗೂ ಒದಗಿಸುವುದೇ ಮಾರ್ಗವಾಗಿದೆ. ಎಲ್ಲಿಯ ತನಕ ಶೋಷಿತರು ಶಿಕ್ಷಣಕ್ಷೇತ್ರವನ್ನು ಪ್ರವೇಶಿಸುವುದಿಲ್ಲವೋ ಅಲ್ಲಿಯ ತನಕ ಅವರಲ್ಲಿ ಕೆಚ್ಚು ಮೂಡುವುದಿಲ್ಲ ಎಂದು ಡಾ. ಅಂಬೇಡ್ಕರ್ ಹೇಳುತ್ತಿದ್ದರು. ಕೀಳರಿಮೆಯಿಂದ ಹೊರಬಂದು ಸ್ವಾಭಿಮಾನ ಮತ್ತು ಹೋರಾಟದ ಮನೋಭಾವವನ್ನು ಬೆಳೆಸಿಕೊಳ್ಳದೇ ಮೇಲ್ವರ್ಗದ ಜನರ ಸೇವೆ ಮಾಡುವ ದಾಸ್ಯಪ್ರವೃತ್ತಿಯಿದ್ದರೆ ಏನನ್ನು ಸಾಧಿಸಲು ಸಾಧ್ಯವಿಲ್ಲ ಎಂದು ಡಾ. ಅಂಬೇಡ್ಕರ್ ಹೇಳುತ್ತಿದ್ದರು. ಆ ಕಾರಣಕ್ಕಾಗಿ ಡಾ. ಅಂಬೇಡ್ಕರ್ ಜಯಂತಿಯನ್ನು ಶೋಷಿತರು 'ಸ್ವಾಭಿಮಾನದ ದಿನವನ್ನಾಗಿ' ಆಚರಿಸಲು ನಿರ್ಧಾರ ಮಾಡಿದ್ದಾರೆ.

ಡಾ. ಅಂಬೇಡ್ಕರ್ ಭಾರತದ ಜಾತಿ ವ್ಯವಸ್ಥೆ ಮತ್ತು ಅದರಿಂದ ಆಗಿರುವ ಶೋಷಣೆಯನ್ನು ಆಳವಾಗಿ ಅಧ್ಯಯನ ಮಾಡಿ ಹಲವು ಸಂಪುಟಗಳಲ್ಲಿ ಅದನ್ನು ಹೊರತಂದಿದ್ದಾರೆ. ಭಾರತ ಸಾಮಾಜಿಕವ್ಯವಸ್ಥೆಯಲ್ಲಿ ದಲಿತರು, ಹಿಂದುಳಿದವರ್ಗದವರು, ಅಲ್ಪಸಂಖ್ಯಾತರು ಮತ್ತು ಮಹಿಳೆಯರು ಇತಿಹಾಸದ ಉದ್ದಕ್ಕೂ ಶೋಷಿತರಾಗಿ ಕಾಣಬಂದಿದ್ದಾರೆ. ಆ ವಿಷವರ್ತುಲದಿಂದ ಹೇಗೆ ಹೊರಬರಬೇಕು ಎಂದು ಡಾ. ಅಂಬೇಡ್ಕರ್ ತಮ್ಮ ಕೃತಿಗಳಲ್ಲಿ ಸವಿಸ್ತಾರವಾಗಿ ಚರ್ಚಿಸಿದ್ದಾರೆ. ಪರಿಹಾರವನ್ನು ಸೂಚಿಸಿದ್ದಾರೆ.

ಡಾ. ಅಂಬೇಡ್ಕರ್ ಗುರುತಿಸಿದ ಮೊದಲ ಸಮಸ್ಯೆ, ಭಾರತದಲ್ಲಿ ವ್ಯಕ್ತಿ ಕೆಳ ಜಾತಿಯಲ್ಲಿ ಹುಟ್ಟಿದ ಕಾರಣಕ್ಕಾಗಿ ಅವನಿಗೆ ವಿದ್ಯೆ ಸಿಗುವುದಿಲ್ಲ, ಆಸ್ತಿ ಸಿಗುವುದಿಲ್ಲ. ಪ್ರತಿಭೆಯಿದ್ದರೂ ಅಸ್ಪೃಶ್ಯನಾಗಿಯೇ ಇರಬೇಕಾಗುತ್ತದೆ. ಶ್ರೇಣೀಕೃತ ಸಮಾಜ ವ್ಯವಸ್ಥೆಯಲ್ಲಿ ಆತ ಸಾಯುವ ತನಕ ತನ್ನ ಜಾತಿ ಕಬಂಧಬಾಹುವಿನಿಂದ ತಪ್ಪಿಸಿಕೊಂಡು ಹೊರಬರುವಂತಿಲ್ಲ. ಯಾವುದೇ ವ್ಯಕ್ತಿಗೆ ಒಂದು ಜಾತಿಯಲ್ಲಿ ಹುಟ್ಟುವ ಆಯ್ಕೆಯಿರುತ್ತದೆಯೇ? ಹುಟ್ಟಿದ್ದ ಜಾತಿಯಿಂದಲೇ ಅವನು ಎಲ್ಲ ಅವಕಾಶದಿಂದ ವಂಚಿತನಾಗುವುದು ಎಂದರೆ ಅದೊಂದು ಅಮಾನವೀಯ ಸಾಮಾಜಿಕ ವ್ಯವಸ್ಥೆಯಲ್ಲವೇ ಎಂಬುದು ಡಾ. ಅಂಬೇಡ್ಕರ್ ಅವರ ಪ್ರಶ್ನೆ. ಜಾತಿಯಿಂದಲೇ ವ್ಯಕ್ತಿಯನ್ನು ಎಲ್ಲ ಅವಕಾಶಗಳಿಂದ ವಂಚಿತನನ್ನಾಗಿ ಮಾಡುವ ಪದ್ಧತಿ ಭಾರತ ಬಿಟ್ಟು ಬೇರೆ ಎಲ್ಲೂ ಕಾಣುವುದಿಲ್ಲವೆಂದು ಡಾ. ಅಂಬೇಡ್ಕರ್ ಹೇಳುತ್ತಿದ್ದರು.

ಅದಕ್ಕಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ಡಾ.ಅಂಬೇಡ್ಕರ್ ಅವರು ಬ್ರಿಟಿಷರ ಮನವೊಲಿಸಿ ದಲಿತರಿಗೆ ಶಿಕ್ಷಣ ಕೊಡಿಸುವ ಪ್ರಯತ್ನವನ್ನು ಮಾಡುತ್ತಾರೆ. ದಲಿತರಷ್ಟೇ ಅಲ್ಲದೆ ಸಾಮಾಜಿಕ ಕಟ್ಟುಪಾಡುಗಳಿಗೆ ಸಿಲುಕಿ ಶೋಷಣೆಗೊಳಗಿದ್ದ ಮಹಿಳೆಯರಲ್ಲೂ ಜಾಗೃತಿ ಮೂಡಿಸಲು ಪ್ರಯತ್ನಿಸಿದರು. 1942ರಲ್ಲಿ ನಡೆದ ಮಹಿಳಾ ಸಮಾವೇಶವೊಂದರಲ್ಲಿ ಮಹಿಳೆಯರ ಅನುಕೂಲಕ್ಕಾಗಿ ಹತ್ತು ಅಂಶಗಳ ಕಾರ್ಯಕ್ರಮವನ್ನು ರೂಪಿಸುತ್ತಾರೆ. 'ಹಿಂದು ಕೋಡ್ ಶಾಸನ' ರೂಪಿಸುವಲ್ಲಿ ಡಾ. ಅಂಬೇಡ್ಕರ್ ಪಾತ್ರ ದೊಡ್ಡದು. ಭಾರತೀಯ ಮಹಿಳೆ ಧಾರ್ಮಿಕ ಗ್ರಂಥಗಳಲ್ಲಿ ಮಾತ್ರ ಪೂಜ್ಯಳು. ವಾಸ್ತವವಾಗಿ ಪುರುಷ ಪ್ರಧಾನ ಸಮಾಜದಲ್ಲಿ ಆಕೆ ಸದಾ ಶೋಷಿತಳು. ಧರ್ಮಗ್ರಂಥಗಳೇ ಆಕೆಯ ಸ್ವಾತಂತ್ರ್ಯವನ್ನು ಕಸಿದುಕೊಂಡು, ಆಕೆ ತಂದೆ, ಗಂಡ ಮತ್ತು ಮಕ್ಕಳ ಅಧೀನದಲ್ಲಿರಬೇಕು ಎಂದಿರುವ ಮಾತನ್ನು ತಮ್ಮ ಗ್ರಂಥಗಳಲ್ಲಿ ಡಾ. ಅಂಬೇಡ್ಕರ್ ಉಲ್ಲೇಖಿಸುತ್ತಾರೆ.

ಯಾವ ದಲಿತರು ಐದು ಸಾವಿರ ವರ್ಷಗಳಿಂದ ಸಮಾನ ಶಿಕ್ಷಣ, ಸಮಾನ ಅವಕಾಶ ಮತ್ತು ಸಾಮಾಜಿಕ ಸ್ಥಾನಮಾನಗಳಿಂದ ವಂಚಿತರಾಗಿದ್ದರೋ ಅಂತಹವರಿಗೆ ಡಾ. ಅಂಬೇಡ್ಕರ್ ತಾವು ರಚಿಸಿದ ಸಂವಿಧಾನದಲ್ಲಿ ಸೂಕ್ತ ಅವಕಾಶ ಕೊಟ್ಟರು. ಭಾರತೀಯ ಸಮಾಜದಲ್ಲಿರುವ ಎಲ್ಲಾ ಸಮುದಾಯಗಳು ಏಕಪ್ರಕಾರವಾಗಿ ಬೆಳವಣಿಗೆಯಾಗಲು ಡಾ. ಅಂಬೇಡ್ಕರ್ ರಚಿಸಿದ ಸಂವಿಧಾನ ಮಹತ್ವದ ಅವಕಾಶ ನೀಡಿದೆ. ಅವರ ಚಿಂತನೆ, ಕಾನೂನಿನ ಪಾಂಡಿತ್ಯವನ್ನು ಶೋಷಿತ ಸಮಾಜಗಳು ಪಡೆದುಕೊಂಡಿವೆ.

ದಲಿತರು, ಅಲೆಮಾರಿಗಳು ಮತ್ತು ಹಿಂದುಳಿದವರ್ಗದ ಜನರಿಗೆ ಭೂಮಿ ಹೊಂದುವ ಹಕ್ಕಿರಲಿಲ್ಲ. ಆಸ್ತಿ ಪಡೆಯುವುದು ನಾಗರಿಕನ ಪ್ರತಿಯೊಬ್ಬನ ಹಕ್ಕು. ಅವನಿಗೆ ತನ್ನ ಅಭಿಪ್ರಾಯ ಹೇಳುವ ವಾಕ್ ಸ್ವಾತಂತ್ರ್ಯವಿದೆ. ತನಗೆ ಬೇಕಾದ ಧರ್ಮವನ್ನು ಅನುಸರಿಸುವ ಹಕ್ಕಿದೆ. ಅಸ್ಪೃಶ್ಯತೆಯನ್ನು ಆಚರಿಸುವವರಿಗೆ ಶಿಕ್ಷೆ ಮಾಡುವ ಕಾನೂನು ಇದೆ. ಸ್ವಾತಂತ್ರ್ಯ ಪಡೆದು 75 ವರ್ಷಗಳ ನಂತರ ಭಾರತ ದಲಿತ, ಹಿಂದುಳಿದ, ಅಲ್ಪಸಂಖ್ಯಾತ ಮತ್ತು ಮಹಿಳೆಯರು ತಮ್ಮನ್ನು ಚಿಂತನೆಗೆ ಒಳಪಡಿಸಿಕೊಳ್ಳಬೇಕು. ನಮ್ಮ



**ಲೇಖಕರು**

ಶ್ರೀ ಬಿ.ಹೀರಾನಾಯ್ಕ್ ಹಿರಿಯ ಕೆ.ಎ.ಎಸ್. ಅಧಿಕಾರಿಯಾಗಿ ನಿವೃತ್ತರಾಗಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಆಪ್ತಕಾರ್ಯದರ್ಶಿಯಾಗಿದ್ದ ಶ್ರೀ ಹೀರಾನಾಯ್ಕ್ ಸಿದ್ದರಾಮಯ್ಯ ಸರ್ಕಾರ ತಂದ ಅನೇಕ ಪ್ರಗತಿಪರ ಯೋಜನೆಗಳ ಅನುಷ್ಠಾನದಲ್ಲಿ ಸಕ್ರಿಯವಾಗಿ ಪಾಲುಗೊಂಡಿದ್ದಾರೆ. ರಾಜ್ಯದಲ್ಲಿ ಆರು ಸಾವಿರಕ್ಕೂ ಹೆಚ್ಚಿನ ಜನವಸತಿ ಪ್ರದೇಶಗಳಿಗೆ ನಾಗರಿಕ ಸೌಲಭ್ಯಗಳೇ ದೊರೆಯುತ್ತಿರಲಿಲ್ಲ. ಕಂದಾಯ ಇಲಾಖೆಯ ಪ್ರಕಾರ ಅವು ಗ್ರಾಮಗಳಾಗಿರಲಿಲ್ಲ. ಉದಾ.ತಾಂಡಾ. ಕುರುಬರ ಹಾಡಿ, ಗೊಲ್ಲರಹಟ್ಟಿ, ಕೇರಿ, ಪಾಳ್ಯ, ಕ್ಯಾಂಪ್, ಕೇರಿ, ಅಗ್ರಹಾರ ಮುಂತಾದ ಹೆಸರುಗಳ ಪ್ರದೇಶದಲ್ಲಿ ವಾಸ ಮಾಡುತ್ತಿದ್ದ ಲಕ್ಷಾಂತರ ಜನರಿಗೆ ಯಾವುದೇ ಸೌಲಭ್ಯ ದೊರೆಯುತ್ತಿರಲಿಲ್ಲ. ಕರ್ನಾಟಕ ಸರ್ಕಾರ ಇವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಿ ಅಲ್ಲಿ ವಾಸ ಮಾಡುವ ಜನರಿಗೆ ನಾಗರಿಕ ಸೌಲಭ್ಯ ಕೊಡಲು ಬೇಕಾದ ಕಾನೂನು ತಿದ್ದುಪಡಿಗೆ ಸಲಹೆ ಕೇಳಿತ್ತು. ಈಗ ಮೂರು ಸಾವಿರ ಇಂತಹ ಜನವಸತಿ ಪ್ರದೇಶಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಲಾಗಿದೆ.

ದಾವಣಗೆರೆಜಿಲ್ಲೆ ಹೊನ್ನಾಳಿ ತಾಲ್ಲೂಕಿನ ಸೂರಗೊಂಡನಕೊಪ್ಪದಲ್ಲಿ ಸಂತ ಸೇವಾಲಾಲ್ ಹೆಸರಿನಲ್ಲಿ ಬಹುದೊಡ್ಡ ಕೇಂದ್ರವನ್ನು ರೂಪಿಸಿದ್ದಾರೆ. ಇದೊಂದು ಅಧ್ಯಾತ್ಮ ಮತ್ತು ಬಂಜಾರ ಸಮುದಾಯ ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿಗೆ ಶ್ರಮಿಸುವ ಸಂಸ್ಥೆ.

ಶ್ರೀಬಿ.ಹೀರಾನಾಯ್ಕ್ ಸೃಜನಶೀಲ ಬರಹಗಾರರು. ತಿರುಪತಿ ಶ್ರೀ ವೆಂಕಟೇಶ್ವರನ ಮಹಾಭಕ್ತನಾಗಿದ್ದ ಬಂಜಾರ ಸಮುದಾಯದ ಹಾತಿರಾಂ ಬಾವಾಜಿ ಕುರಿತು ಅವರು ರಚಿಸಿರುವ ಸಾಂಸ್ಕೃತಿಕ ಕಾದಂಬರಿ 'ಹಾತಿರಾಂ ಬಾವಾಜಿ' ತುಂಬ ಜನಪ್ರಿಯ ಕೃತಿಯಾಗಿದೆ. ಅನೇಕ ಭಾಷೆಗಳಿಗೆ ಅನುವಾದವಾಗಿದೆ. ಬಂಜಾರ ಸಮುದಾಯದ ಸಾಂಸ್ಕೃತಿಕ ಮತ್ತು ಧಾರ್ಮಿಕ ವೈಶಿಷ್ಟ್ಯವನ್ನು ಹೇಳುವ ಈ ಕೃತಿ ಸರ್ವಜನಾದಾರಣೀಯವಾಗಿದೆ.



ಹಿರಿಯರು ಪಶುಗಳಿಗಿಂತ ಕೊನೆಯ ಬದುಕನ್ನು ಅನುಭವಿಸಿ ಸದಾ ಕಣ್ಣೀರಿನಲ್ಲಿ ದಿನ ಕಳೆದಿದ್ದಾರೆ. ಡಾ. ಅಂಬೇಡ್ಕರ್ ರಚಿಸಿದ ಸಂವಿಧಾನ ನಮಗೆ ನೀಡಿದ ಹಕ್ಕು ಮತ್ತು ಸೌಲಭ್ಯಗಳಿಂದಾಗಿ ತಾವು ಎಲ್ಲ ಮನುಷ್ಯರಂತೆ ತಲೆಯೆತ್ತಿ ಗೌರವದಿಂದ ಬಾಳುತ್ತಿದ್ದೇವೆ. ಅದರ ಕೀರ್ತಿ ಯಾರಿಗೆ ಸಲ್ಲಬೇಕು.

ಇಂದಿನ ರಾಜಕಾರಣಿಗಳಿಗೋ ಅಥವಾ ಭಾರತಕ್ಕೆ ಅಮೂಲ್ಯವಾದ ಸಂವಿಧಾನ ಕೊಟ್ಟು ಕೋಟ್ಯಂತರ ಶೋಷಿತರನ್ನು ಕಾಪಾಡಿದ ಡಾ. ಅಂಬೇಡ್ಕರ್ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಮಹಾನ್ ಪುರುಷ ಡಾ. ಅಂಬೇಡ್ಕರ್ ಅವರನ್ನು ಕೃತಜ್ಞತೆಯಿಂದ ನೆನೆಯುವುದು ಭಾರತೀಯರೆಲ್ಲರ ಕರ್ತವ್ಯವಾಗಿದೆ.

ಡಾ. ಅಂಬೇಡ್ಕರ್ ಅವರ ಕೆಲವು ಮಾತುಗಳನ್ನು ಕೇಳೋಣ! ಅವು ನಮ್ಮ ಬದುಕಿಗೆ ಮಾರ್ಗದರ್ಶಿ ಸೂತ್ರಗಳಾಗಿವೆ.

"ಮನುಷ್ಯನಲ್ಲಿ ಒಳ್ಳೆಯ ಆಲೋಚನೆಯಿದ್ದರೆ, ಒಳ್ಳೆಯ ಮಾತು ಮತ್ತು ಕೆಲಸಗಳು ನಡೆಯುತ್ತದೆ. ಅಂತಹ ಮನುಷ್ಯನನ್ನು ನೆರಳು ವ್ಯಕ್ತಿಯನ್ನು ಹಿಂಬಾಲಿಸುವಂತೆ ಸಂತೋಷ ಹಿಂಬಾಲಿಸುತ್ತದೆ."

"ಧರ್ಮ ಸದ್ಧರ್ಮವಾಗಬೇಕಾದರೆ, ಅಲ್ಲಿ ವಿದ್ಯೆ, ಪ್ರಜ್ಞೆ, ಶೀಲ, ಸಮಾನ ಅವಕಾಶ ಮತ್ತು ಯೋಗ್ಯತೆಗೆ ಬೆಲೆ ದೊರೆಯಬೇಕಾಗುತ್ತದೆ."

"ಎಲ್ಲ ಪ್ರವಾದಿಗಳು ಮೋಕ್ಷದಾತರಾಗಿದ್ದಾರೆ. ಆದರೆ ಈ ವಿಚಾರದಲ್ಲಿ ಮಾತು ಕೊಡದ ಧರ್ಮಗುರುವೆಂದರೆ ಬುದ್ಧ ಒಬ್ಬನೇ. ಅವನು ಮೋಕ್ಷದಾತನಿಗೂ ಮತ್ತು ಮಾರ್ಗದರ್ಶಕನಿಗೂ ಇರುವ ವ್ಯತ್ಯಾಸವನ್ನು ಸಮರ್ಥವಾಗಿ ತೋರಿಸಿಕೊಟ್ಟಿದ್ದಾನೆ."

"ನಿಮ್ಮ ಜೀವನದ ಒಳಿತು ಕೆಡಕುಗಳು ನೀವು ಹುಟ್ಟುವ ಮುನ್ನವೇ ನಿರ್ಧಾರವಾಗಿ ಬಿಟ್ಟಿವೆ ಎಂಬ ಮೂಢನಂಬಿಕೆಯನ್ನು ಕಿತ್ತೊಗೆಯಿರಿ. ನಿಮ್ಮ ಸುಖ-ದುಃಖ, ದಾರಿದ್ರ್ಯಗಳಿಗೆ ದೇವರು ಕಾರಣ ಅಲ್ಲವೇ ಅಲ್ಲ. ಅವುಗಳಿಂದ ಬಿಡುಗಡೆಯಿಲ್ಲ ಎಂಬ ನಿರಾಸೆಯ ಮಾತು ನೀವು ಶಾಶ್ವತ ಗುಲಾಮರಾಗಿರಲು ಕಾರಣ."

"ಸಮಾಜದಲ್ಲಿ ಅವಕಾಶಗಳಿಂದ ವಂಚಿತರಾದ ಹಿಂದುಳಿದವರೆಲ್ಲರ ಶೈಕ್ಷಣಿಕ ಮತ್ತು ಆರ್ಥಿಕ ಪ್ರಗತಿಗೆ ಅಗತ್ಯವಾದ ವಿಶೇಷ ಸೌಲಭ್ಯವನ್ನು ಒದಗಿಸಲು ಮತ್ತು ಆಡಳಿತ ನೇಮಕಾತಿಯಲ್ಲಿ ಸಾಕಷ್ಟು ಪ್ರಾತಿನಿಧ್ಯ ನೀಡಲು ಸರ್ಕಾರ ಕಡ್ಡಾಯವಾಗಿ ಪ್ರಯತ್ನಿಸತಕ್ಕದ್ದು."

"ಸರ್ಕಾರ ಜನಪರವು ನ್ಯಾಯಬದ್ಧ ನಿಷ್ಪಕ್ಷಪಾತವಾಗಿ ಕಾರ್ಯನಿರ್ವಹಿಸಬೇಕು. ಅದು ಶಕ್ತಿವಂತರಿಗಿಂತ ಬಲಹೀನರ ಪರವಾಗಿರಬೇಕು. ಆಗ ಉತ್ತಮ ಆಡಳಿತ ದೊರೆಯುತ್ತದೆ".

## ನಡೆದಾಡುವ ದೇವರ ಸ್ಮರಣೆ

**ಸಿದ್ಧಗಂಗಾ ಮಠಾಧೀಶರಾಗಿದ್ದ ಪೂಜ್ಯ ಡಾ. ಶಿವಕುಮಾರ ಸ್ವಾಮೀಜಿ ಅವರ 116 ನೆಯ ಜನ್ಮದಿನಾಚರಣೆಯನ್ನು ಶ್ರೀದೇವಿ ವಿದ್ಯಾಸಂಸ್ಥೆಯಲ್ಲಿ ಏಪ್ರಿಲ್ 1 ರಂದು ಆಚರಿಸಲಾಯಿತು.**



# ನರ್ಸಿಂಗ್ ಆರೈಕೆಯಿಂದ ಆಸ್ಪತ್ರೆಯಲ್ಲಿ ಸುರಕ್ಷತೆಯ ವಾತಾವರಣ



■ **ಡಾ. ಟಿ.ಎಸ್. ಭೀಮರಾಜು**
**ಪ್ರಾಧ್ಯಾಪಕರು, ಮನೋವೈದ್ಯಶಾಸ್ತ್ರ ನರ್ಸಿಂಗ್**
**ಶ್ರೀದೇವಿ ನರ್ಸಿಂಗ್ ಕಾಲೇಜ್**

ಆಸ್ಪತ್ರೆಯಲ್ಲಿ ರೋಗಿಗಳನ್ನು ತೃಪ್ತಿಪಡಿಸಲು ಮತ್ತು ಅವರ ರಕ್ಷಣೆಗಾಗಿ ಬಹು ಆರೋಗ್ಯ ರಕ್ಷಣಾ ವ್ಯವಸ್ಥೆಯ ವಾತಾವರಣವಿರುವುದು ಬಹಳ ಮುಖ್ಯವಾಗಿದೆ. ಆರೋಗ್ಯ ರಕ್ಷಣೆಯ ವ್ಯವಸ್ಥೆಯಲ್ಲಿ ರೋಗಿಗಳನ್ನು ನರ್ಸಿಂಗ್ ಸೇವೆಯಿಂದ ತೃಪ್ತಿ ಪಡಿಸುವುದು ಅತ್ಯಂತ ಮುಖ್ಯವಾಗಿರುತ್ತದೆ. ಆರೋಗ್ಯ ರಕ್ಷಣೆಯ ವೇಳೆ ರೋಗಿಗಳಿಗೆ ಸಂಭವಿಸುವ ಹಾನಿ, ಸಿಬ್ಬಂದಿಗಳ ತಪ್ಪು ನಿರ್ಧಾರ ಮತ್ತು ಅದರಿಂದಾಗುವ ಅಪಾಯಗಳನ್ನು ತಡೆಗಟ್ಟಲು ಅಥವಾ ಕಡಿಮೆ ಮಾಡಲು ಜಾಗತಿಕ ಆರೋಗ್ಯ ಸಂಸ್ಥೆ ಸದಾಕಾಲ ಆದ್ಯತೆ ಕೊಟ್ಟಿದೆ.

ರೋಗಿಯ ಮಾನಸಿಕ ಸುರಕ್ಷತೆಗೆ ಅಗತ್ಯವಾದ ಗುಣಮಟ್ಟದ ಆರೋಗ್ಯ ಸೇವೆಗಳನ್ನು ಒದಗಿಸಬೇಕಾಗುತ್ತದೆ. ರೋಗಿಗಳ ಸುರಕ್ಷತಾ ಕಾರ್ಯತಂತ್ರಗಳು, ಸ್ಪಷ್ಟ ನೀತಿ, ಸಮರ್ಥವಾದ ನಾಯಕತ್ವ, ಸುರಕ್ಷತೆಯ ವಿಧಾನದಲ್ಲಿ ಸುಧಾರಣೆಗಳು, ನುರಿತ ಆರೋಗ್ಯ ಕಾರ್ಯಕರ್ತರ ಆರೈಕೆ, ಅದರಲ್ಲಿ ರೋಗಿಗಳು ಪರಿಣಾಮಕಾರಿ ಪಾಲ್ಗೊಳ್ಳುವಿಕೆ, ಕೆಲಸದ ಸ್ಥಳದಲ್ಲಿ ಸುರಕ್ಷತೆ, ನಂಬಿಕೆ, ಔಷಧಗಳ ನೀಡಿಕೆಯಲ್ಲಿ ನಡೆಯುವ ತಪ್ಪು ನಿರ್ಧಾರಗಳು, ಅದರ ಹಾನಿ, ಆರೋಗ್ಯ ರಕ್ಷಣೆಯ ಸಂದರ್ಭದಲ್ಲಿ ಉಂಟಾಗುವ ಸೋಂಕುಗಳು, ಅಸುರಕ್ಷಿತ ಶಸ್ತ್ರಚಿಕಿತ್ಸೆಯ ವಿಧಾನ, ಅಸುರಕ್ಷಿತ ಸೋಂಕಿನ ಭೀತಿ, ರೋಗ ನಿರ್ಣಯದ ದೋಷ ಮತ್ತು ವಿಕಿರಣ ದೋಷದಿಂದ ರೋಗಿಯನ್ನು ರಕ್ಷಿಸುವುದು – ಇವುಗಳನ್ನು ರೋಗಿಯ ಸುರಕ್ಷತೆಯ ಸಂದರ್ಭದಲ್ಲಿ ವೃತ್ತಿಪರತೆಯಿಂದ ಗಮನಿಸಿ ಕ್ರಮಕೈಗೊಳ್ಳುವಂತೆ ಜಾಗತಿಕ ಆರೋಗ್ಯ ಸಂಸ್ಥೆ ನಿರ್ದೇಶನ ನೀಡಿದೆ. ಅದಾಗ್ಯೂ ಈ ಬಗ್ಗೆ ಸಾರ್ವಜನಿಕ ಅರಿವು ಮತ್ತು ಪಾಲ್ಗೊಳ್ಳುವಿಕೆಯನ್ನು ಹೆಚ್ಚಿಸುವುದು, ಜನರ ತಿಳುವಳಿಕೆಯನ್ನು ಹೆಚ್ಚಿಸುವುದು ಮತ್ತು ಒಗ್ಗಟ್ಟಿನಿಂದ ಕೆಲಸ ಮಾಡುವ ಮೂಲಕ ರೋಗಿಗಳ ಸುರಕ್ಷತೆಯನ್ನು ಪ್ರೇರೇಪಿಸುವುದು ಆರೋಗ್ಯಕ್ಷೇತ್ರದಲ್ಲಿ ಕೆಲಸ ಮಾಡುವವರ ಮುಖ್ಯ ಉದ್ದೇಶವಾಗಿದೆ.

ಆಸ್ಪತ್ರೆಯ ವಿನ್ಯಾಸವು ರೋಗಿಗಳಿಗೆ ಮನೆಯ ವಾತಾವರಣದ ವಾತಾವರಣವನ್ನು ಒದಗಿಸಬೇಕು. ಒತ್ತಡ, ವ್ಯಾಕುಲತೆ, ಕಡಿಮೆ ಶಬ್ದವಿರುವ ರೀತಿಯ ವಿನ್ಯಾಸದ ವಾತಾವರಣವಿರಬೇಕು. ಪ್ರಕೃತಿಯ ಬೆಳಕಿನಿಂದ ರೋಗಿಯ ಆರೋಗ್ಯ ವೃದ್ಧಿಸಲಿದೆ. ಸ್ವಚ್ಛ ಗಾಳಿ ಮತ್ತು ಬೆಳಕಿನ ವಿನ್ಯಾಸದಿಂದ ಅರೆವೈದ್ಯಕೀಯ ಸಿಬ್ಬಂದಿ ಮತ್ತು ವೈದ್ಯರ ಮೇಲೆ ಬಹಳಷ್ಟು ಉತ್ತಮ ಪರಿಣಾಮ ಬೀರಿದೆ ಎನ್ನುವುದು ಅಧ್ಯಯನದಿಂದ ತಿಳಿದು ಬಂದಿದೆ.

ಇದಲ್ಲದೆ, ರೋಗಿಗಳು ಮತ್ತವರ ಕುಟುಂಬದವರ ಸುರಕ್ಷಣೆಗಾಗಿ ಉಷ್ಣತೆ, ಆರ್ದ್ರತೆ, ಶಬ್ದ, ಗಾಳಿ, ಬೆಳಕು, ವಾಸನೆ, ದೈಹಿಕ ಅಪಾಯಗಳು, ಬೀಳುವಿಕೆ, ಗಾಯಗಳು, ಬೆಡ್‌ಸೋರ್, ಬೆಂಕಿ ಅನಾಹುತ, ಕೀಟ ನಿಯಂತ್ರಣ ಮತ್ತು ಅಪಘಾತಗಳಂತಹ ಅಂಶಗಳ ಬಗ್ಗೆ ಆಸ್ಪತ್ರೆಯ ಸಿಬ್ಬಂದಿ ಹೆಚ್ಚು ಗಮನಹರಿಸಬೇಕು.

ಆಸ್ಪತ್ರೆಯ ಸೌಕರ್ಯಗಳಲ್ಲಿ ಆಸ್ಪತ್ರೆಯ ವಿದ್ಯುತ್ ಸುರಕ್ಷತಾ ಕ್ರಮಗಳು ಅತಿ ಮುಖ್ಯವಾಗಿವೆ. ಉದಾಹರಣೆಗೆ, ವಿದ್ಯುತ್ ಅವಘಡಗಳನ್ನು ತಪ್ಪಿಸಲು ಸೂಕ್ತವಾದ ಸ್ಥಳಗಳಲ್ಲಿ ವಿದ್ಯುತ್ ಉಪಕರಣಗಳನ್ನು ಅಳವಡಿಸಬೇಕಾಗುತ್ತದೆ ಮತ್ತು ಅದನ್ನು ಸುಸಜ್ಜಿತಗೊಳಿಸಬೇಕಾಗುತ್ತದೆ. ಜೊತೆಗೆ ಯಾವುದೇ ರೀತಿಯ ನೈಸರ್ಗಿಕ ವಿಕೋಪದಿಂದ ತಪ್ಪಿಸಿಕೊಳ್ಳಲು ಸುರಕ್ಷತಾ ಸ್ಥಳ, ಸ್ಥಳಾಂತರಿಸುವ ಕಾರ್ಯವಿಧಾನಗಳು, ತುರ್ತು ನಿರ್ಗಮನ, ಅಗ್ನಿಶಾಮಕಗಳ ಬಳಕೆ, ನಿಯಮಿತ ಅಣಕು ಅಗ್ನಿ ಸುರಕ್ಷತಾ ಪ್ರದರ್ಶನ, ಫೈರ್ ಅಲರಾಂನಂತಹ ಅಗ್ನಿ ಸುರಕ್ಷತಾ ಕ್ರಮಗಳನ್ನು ಆಸ್ಪತ್ರೆಯಲ್ಲಿ ಅಳವಡಿಸಿಕೊಳ್ಳಬೇಕು.



ಜೊತೆಗೆ ಗಾಯಗೊಂಡವರಿಗೆ ಸಂಭವಿಸುವ ಅಪಾಯವನ್ನು ಗುರುತಿಸುವುದು, ಮಾನಸಿಕ ರೋಗಿಗಳು, ಮಂದದೃಷ್ಟಿ ಹೊಂದಿರುವ ರೋಗಿಗಳು, ವಾಕರ್ ಮೂಲಕ ನಡೆಯುವವರು, ವೀಲ್‌ಚೇರ್‌ನಲ್ಲಿ ಚಲಿಸುವವವರು, ನಡೆಯಲು ಸಾಧ್ಯವಾಗದ ಸ್ಥಿತಿಯಲ್ಲಿರುವ ರೋಗಿಗಳು–ಇವರ ಆರೈಕೆಯ ಸಂದರ್ಭದಲ್ಲಿ ಪರಿಸರ ಸುರಕ್ಷತೆಯನ್ನು ವಿಶೇಷವಾಗಿ ಗಮನಿಸಬೇಕಾಗುತ್ತದೆ.

ಹೊರರೋಗಿ ವಿಭಾಗ, ಒಳರೋಗಿ ವಿಭಾಗ ಮತ್ತು ಎಲ್ಲಾ ವಾರ್ಡ್‌ಗಳಲ್ಲಿ ಅಪಘಾತ ಮತ್ತು ಗಾಯಗಳನ್ನು ಕಡಿಮೆ ಮಾಡಲು ಅಪಾಯ ಸಮೀಕ್ಷೆ ಮತ್ತು ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮೌಲ್ಯಮಾಪನವನ್ನು ಆಗಾಗ ಮಾಡುತ್ತಿರಬೇಕು.

ಚಿಕಿತ್ಸಕ ಉದ್ದೇಶಗಳಿಗಾಗಿ ಶಾರೀರಿಕ ನಿರ್ಬಂಧಗಳ ಸಾಧನಗಳನ್ನು ಬಳಸಲಾಗುತ್ತದೆ. ಇದು ರೋಗಿಯ ಸುರಕ್ಷತಾ ಉದ್ದೇಶವಾಗಿದ್ದು, ಅವರನ್ನು ಹಾನಿಯಿಂದ ರಕ್ಷಿಸುತ್ತದೆ. ಇತರ ಸುರಕ್ಷತಾ ಸಾಧನಗಳಾದ ಸೈಡ್ ರೇಲ್‌ಗಳು, ಗ್ರ್ಯಾಬ್ ಬಾರ್‌ಗಳು ಮತ್ತು ನಾನ್‌ಸ್ಕಿಡ್ ಚಪ್ಪಲಿಗಳಂತಹ ವ್ಯವಸ್ಥೆಗಳು ರೋಗಿಯ ಆರೋಗ್ಯ ರಕ್ಷಣೆ ಮತ್ತು ಆಸ್ಪತ್ರೆಯಲ್ಲಿ ಸುರಕ್ಷತಾ ವಾತಾವರಣ ಉತ್ತೇಜಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಆಸ್ಪತ್ರೆಯಲ್ಲಿ ಗುಣಮಟ್ಟದ ಆರೈಕೆ ವ್ಯವಸ್ಥೆಯನ್ನು ಅಳವಡಿಸಿಕೊಳ್ಳುವುದು ಕಡ್ಡಾಯ.

ಆಸ್ಪತ್ರೆಯಲ್ಲಿನ ಶೂಶ್ರೂಷಕರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ಮಾಡುವ ಕೆಲಸ ಕಾರ್ಯಗಳಾದ ರಕ್ತದೊತ್ತಡದ ಮೇಲೆ ನಿಗಾ, ಗಾಯದ ಆರೈಕೆ, ಸರಿಯಾಗಿ ಕೈ ತೊಳೆಯುವ ವಿಧಾನ, ನೋವು ನಿರ್ವಹಣೆ ಕೌಶಲ್ಯ, ಮುಂತಾದ ಕ್ಲಿನಿಕಲ್ ಸಾಮರ್ಥ್ಯ ಮೇಲೆ ಆಯಾಯ ಆಸ್ಪತ್ರೆಯ ಸುರಕ್ಷತೆಯ ಗುಣಮಟ್ಟ ನಿಂತಿರುತ್ತದೆ.

ಸೋಂಕು ನಿಯಂತ್ರಣ ತರಬೇತಿಯು ಆರೋಗ್ಯ ವಿತರಣಾ ವ್ಯವಸ್ಥೆಯಲ್ಲಿ ಬಹಳ ಅವಶ್ಯಕವಾಗಿರುತ್ತದೆ. ಪ್ರತಿಯೊಬ್ಬ ಶೂಶ್ರೂಷಕರು ರೋಗಿಗಳ ಆರೋಗ್ಯ ಕಾಪಾಡುವಲ್ಲಿ ಅವರ ಜೊತೆ ಸಂವಹನ ನಡೆಸುವಲ್ಲಿ ಮಹತ್ವದ ಪಾತ್ರ ವಹಿಸುತ್ತಾರೆ. ಅಪಘಾತ ಮತ್ತು ತುರ್ತು ಸಂದರ್ಭದ ವೇಳೆ ರೋಗಿಯನ್ನು ರಕ್ಷಣೆ ಮಾಡಲು ಎಲ್ಲಾ ವೈದ್ಯರು ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗಳು ಕಡ್ಡಾಯವಾಗಿ ತುರ್ತುಘಟಕದಲ್ಲಿ ಇರಲೇಬೆಕು.

ಗುಣಮಟ್ಟದ ಸೂಚಕಗಳು, ಕೆಪಿಐ, ಎಸ್‌ಡಬ್ಲ್ಯುಒಟಿ ವಿಶ್ಲೇಷಣೆ, ಸಿಬ್ಬಂದಿ ಮೌಲ್ಯಮಾಪನದ ಕಾರ್ಯಕ್ಷಮತೆ, ಆರೋಗ್ಯ ರಕ್ಷಣೆ ಲೆಕ್ಕಪರಿಶೋಧನೆಯ ಮೂಲಕ ನಿಯಮಿತ ಆರೋಗ್ಯ ಸಮೀಕ್ಷೆ, ಉದ್ಯೋಗ ವಿವರಣೆ, ಆರೋಗ್ಯ ಶಿಕ್ಷಣ ಕರಪತ್ರಗಳು, ಬೇಸಿಕ್ ಲೈಫ್ ಸಪೋರ್ಟ್ ಮತ್ತು ಕ್ಲಿನಿಕಲ್ ಸಾಮರ್ಥ್ಯದ ನಿಯಮಿತ ರಿಫ್ರೆಶ್ ಕೋರ್ಸ್, ಕೌಶಲ್ಯ ಮಿಶ್ರಿತ ಕಾರ್ಯಕ್ರಮಗಳು ಆರೋಗ್ಯರಕ್ಷಣೆಯ ವ್ಯವಸ್ಥೆಯಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಮೂರು ಪಾಳಿಗಳಲ್ಲಿ ಕೆಲಸ ಮಾಡುವ ಅನುಭವವನ್ನು ಸಿಬ್ಬಂದಿಗಳನ್ನು ಹೊಂದಿರಬೇಕು.

ನಿಯಮಿತ ಕ್ಲಿನಿಕಲ್ ಸಾಮರ್ಥ್ಯ, ಕೌಶಲ್ಯ ತರಬೇತಿ ಕಾರ್ಯಕ್ರಮ, ಆರೈಕೆ, ಸಹಾನುಭೂತಿ, ಸಾಮರ್ಥ್ಯ, ಸಂವಹನ, ಧೈರ್ಯ ಮತ್ತು ಬದ್ಧತೆಯಂತಹ ಆರು ವಿಷಯಗಳು ನರ್ಸಿಂಗ್ ಆರೈಕೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ಅದು ಸಮರ್ಪಕವಾಗಿದ್ದರೆ ಆಸ್ಪತ್ರೆಯಲ್ಲಿ ಸುರಕ್ಷತೆಯ ವಾತಾವರಣ ನಿರ್ಮಾಣವಾಗುತ್ತದೆ.


# ಮಕ್ಕಳ ಚಿಕಿತ್ಸಾ ವಿಭಾಗದಿಂದ ಸಿ.ಎಂ.ಇ. ಕಾರ್ಯಾಗಾರ

"ಇತ್ತೀಚಿನ ದಿನಗಳಲ್ಲಿ ವೈದ್ಯಕೀಯ ಕ್ಷೇತ್ರ ಪೀಡಿಯಾಟ್ರಿಕ್ಸ್ ನ್ಯೂರೋಲಾಜಿ, ನಿಯೋನಾಟಾಲಜಿ, ಪೀಡಿಯಾಟ್ರಿಕ್ಸ್ ಹೆಮಟೋ ಆಂಕೊಲಾಜಿಸ್ಟ್, ಪೀಡಿಯಾಟ್ರಿಕ್ಸ್ ಕಾರ್ಡಿಯಾಲಜಿ ಮುಂತಾದ ವಿವಿಧ ತಜ್ಞ ವಿಭಾಗಗಳನ್ನು ಹೊಂದಿದೆ. ನವಜಾತ ಶಿಶುಗಳು ಅನಾರೋಗ್ಯಕ್ಕೆ ಒಳಪಟ್ಟಲ್ಲಿ ಈ ಮೇಲ್ಕಂಡ ವಿಭಾಗಗಳಲ್ಲಿ ತುರ್ತು ಚಿಕಿತ್ಸೆ ನೀಡಿ ಸಾವು–ನೋವು ತಪ್ಪಿಸುವುದು ನಮ್ಮ ಗುರಿಯಾಗಿರುತ್ತದೆ. ಶ್ರೀದೇವಿ ವೈದ್ಯಕೀಯ ಕಾಲೇಜಿನಲ್ಲಿ ಅತ್ಯಾಧುನಿಕ ಸುಸಜ್ಜಿತ ಮಕ್ಕಳ ಚಿಕಿತ್ಸಾ ವಿಭಾಗವನ್ನು ಹೊಂದಿದ್ದು, ಅದರಲ್ಲಿ ಆಧುನಿಕ ಉಪಕರಣಗಳನ್ನು ಉಪಯೋಗಿಸಿಕೊಂಡು ಮಕ್ಕಳಿಗೆ ಚಿಕಿತ್ಸಾ ನೀಡಲಾಗುತ್ತಿದೆ. ನುರಿತ ತಜ್ಞ ವೈದ್ಯರ ಲಭ್ಯತೆಯಿದೆ. ಅದೇ ರೀತಿ ನಿರಂತರ ವೈದ್ಯಕೀಯ ಶಿಕ್ಷಣದ ಅಡಿಯಲ್ಲಿ ಕಾರ್ಯಾಗಾರವನ್ನು ಹಮ್ಮಿಕೊಂಡಿದ್ದು ಪದವಿ ಮತ್ತು ಸ್ನಾತಕೋತ್ತರ ವೈದ್ಯಕೀಯ ವಿದ್ಯಾರ್ಥಿಗಳಿಗಾಗಿ ಸೆಮಿನಾರ್ ಮತ್ತು ಸಿ.ಎಂ.ಇ. ಕಾರ್ಯಾಗಾರಗಳನ್ನು ನಡೆಸಲಾಗುತ್ತಿದೆ. ಯುವ ವೈದ್ಯರು ನುರಿತ ವೈದ್ಯರಿಂದ ನೂತನ ಚಿಕಿತ್ಸಾ ವಿಧಾನಗಳನ್ನು ಕಲಿಯುತ್ತಾರೆ. ಅದಕ್ಕಾಗಿ ಅತ್ಯಂತ ಸುಸಜ್ಜಿತ ಸ್ಕಿಲ್ ಲ್ಯಾಬ್‌ನ್ನು ಪ್ರಾರಂಭಿಸಲಾಗಿದೆ. ಇದರ ಪ್ರಯೋಜನವನ್ನು ವಿದ್ಯಾರ್ಥಿಗಳು ಪಡೆದುಕೊಂಡು ಸಮಾಜಕ್ಕೆ ಉತ್ತಮ ವೈದ್ಯರಾಗಿ ಹೊರಹೊಮ್ಮಬೇಕಾಗಿದೆ" ಎಂದು ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್‌ರವರು ತಿಳಿಸಿದರು.

ತುಮಕೂರಿನ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯ ಮತ್ತು ಸಂಶೋಧನಾ ಆಸ್ಪತ್ರೆಯ ವತಿಯಿಂದ ಮಕ್ಕಳ ಚಿಕಿತ್ಸಾ ವಿಭಾಗದಿಂದ ವಿಭಾಗ ಹಾಗೂ ಇಂಡಿಯನ್ ಅಸೋಸಿಯೇಷನ್ ಆಫ್ ಪೀಡಿಯಾಟ್ರಿಕ್ಸ್ ಇವರುಗಳ ಸಹಯೋಗದೊಂದಿಗೆ "ತುರ್ತು ಪರಿಸ್ಥಿತಿಯ ಸಂಬಂಧದಲ್ಲಿ ಮಕ್ಕಳ ಚಿಕಿತ್ಸಾಲಯ" ಎಂಬ ವಿಷಯದ ಬಗ್ಗೆ ಸಿ.ಎಂ.ಇ. ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಶ್ರೀದೇವಿ ಆಸ್ಪತ್ರೆಯ ಪೀಡಿಯಾಟ್ರಿಕ್ ಹೆಮಟೋ ಆಂಕೊಲಾಜಿಸ್ಟ್ ಮತ್ತು ಮಕ್ಕಳ ಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಪ್ರೊ.ಎ.ಟಿ.ಕೆ ರಾವ್‌ರವರು ಮಾತನಾಡುತ್ತಾ "ಇಂದಿನ ಕಾರ್ಯಾಗಾರದಲ್ಲಿ ನವಜಾತ ಶಿಶುಗಳಿಗೆ ಪಾಲನೆ ಮಾಡುವ ವಿಷಯ, ಮಕ್ಕಳಿಗೆ ಬರುವ ಹೃದಯರೋಗ, ನರರೋಗಕ್ಕೆ ಸಂಬಂಧಿಸಿದ ಕಾಯಿಲೆಗಳು ಹಾಗೂ ತುರ್ತು ಚಿಕಿತ್ಸಾ ವಿಭಾಗಗಳು, ಮಕ್ಕಳಲ್ಲಿ ಕಂಡು ಬರುವ ರಕ್ತಕ್ಕೆ ಸಂಬಂಧಪಟ್ಟ ತುರ್ತುರೋಗಗಳು, ಹಾಗೂ ರಕ್ತಸ್ರಾವ ಮತ್ತು ತಡೆಗಟ್ಟುವ ವಿಧಾನಗಳು, ದಿನನಿತ್ಯದಲ್ಲಿ ಕಾಣಿಸುವ ತುರ್ತು ಚಿಕಿತ್ಸೆಗೆ ಸಂಬಂಧಪಟ್ಟಂತೆ ವಿಶೇಷವಾದ ಪ್ರಬಂಧಗಳನ್ನು ಮಂಡಿಸಲಾಗುವುದು. ಅದರ ಪ್ರಯೋಜನವನ್ನು ವಿದ್ಯಾರ್ಥಿಗಳು ಪಡೆಯಬೇಕು" ಎಂದರು. ಈ ಕಾರ್ಯಕ್ರಮದಲ್ಲಿ ಪೀಡಿಯಾಟ್ರಿಕ್ ಹೆಮಟೋ ಆಂಕೊಲಾಜಿಸ್ಟ್ ಅಸೋಸಿಯೇಟ್ ಡಾ.ಸ್ಟಾಲಿನ್ ರಾಮ್‌ಪ್ರಕಾಶ್‌ರವರು ಮಕ್ಕಳ ಚಿಕಿತ್ಸೆಯ ಬಗ್ಗೆ ಪ್ರಬಂಧ ಮಂಡಿಸಿದರು.

ಈ ಕಾರ್ಯಾಗಾರದಲ್ಲಿ ಶ್ರೀದೇವಿ ವೈದ್ಯಕೀಯ ಮಹಾವಿದ್ಯಾಲಯದ ವೈದ್ಯಕೀಯ ನಿರ್ದೇಶಕರಾದ ಡಾ. ರಮಣ್ ಎಂ. ಹುಲಿನಾಯ್ಕರ್, ಶ್ರೀದೇವಿ ಸಂಸ್ಥೆಯ ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಶ್ರೀದೇವಿ ಆಸ್ಪತ್ರೆಯ ನೇತ್ರತಜ್ಞರಾದ ಡಾ.ಲಾವಣ್ಯರವರು ಭಾಗವಹಿಸಿದ್ದರು. ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕ್ವಿಜ್‌ನ್ನು ಏರ್ಪಡಿಸಿ ವಿಜೇತರಿಗೆ ಬಹುಮಾನವನ್ನು ವಿತರಿಸಲಾಗಿತ್ತು. ಶ್ರೀದೇವಿ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಎಲ್.ಹರೇಂದ್ರಕುಮಾರ್‌ರವರು ಮಾತನಾಡುತ್ತಾ "ವೈದ್ಯಕೀಯ ವಿದ್ಯಾರ್ಥಿಗಳಿಗೆ ಮಕ್ಕಳ ತುರ್ತು ಚಿಕಿತ್ಸಾ ವಿಭಾಗಕ್ಕೆ ಸಂಬಂಧಪಟ್ಟಂತೆ ಅನೇಕ ವಿಷಯಗಳನ್ನು ಕ್ರೋಢಿಕರಿಸಿ ಹೇಳಲಾಗಿದೆ. ವೈದ್ಯಕೀಯ ಶಿಕ್ಷಣದ ಅಡಿಯಲ್ಲಿ ನಿರಂತರ ಇಂತಹ ಉತ್ತಮ ಕಾರ್ಯಾಗಾರವನ್ನು ಆಯೋಜಿಸುವ ಅಗತ್ಯವಿದೆ" ಎಂದರು.




**ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಡಾ.ಎಂ.ಆರ್. ಹುಲಿನಾಯ್ಕರ್, ಶ್ರೀದೇವಿ ಆಸ್ಪತ್ರೆಯ ಪೀಡಿಯಾಟ್ರಿಕ್ ಹೆಮಟೋ ಆಂಕೊಲಾಜಿಸ್ಟ್ ಮತ್ತು ಮಕ್ಕಳ ಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಪ್ರೊ.ಎ.ಟಿ.ಕೆ ರಾವ್, ಶ್ರೀದೇವಿ ವೈದ್ಯಕೀಯ ಕಾಲೇಜಿನ ಪ್ರಾಂಶುಪಾಲರಾದ ಡಾ.ಎಂ.ಎಲ್.ಹರೇಂದ್ರಕುಮಾರ್, ಶ್ರೀದೇವಿ ವೈದ್ಯಕೀಯ ಉಪಪ್ರಾಂಶುಪಾಲರಾದ ಡಾ.ರೇಖಾ ಗುರುಮೂರ್ತಿ, ಶ್ರೀದೇವಿ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕರಾದ ಡಾ.ಮೋಹನ್ ಕುಮಾರ್, ಶ್ರೀದೇವಿ ಮಕ್ಕಳ ಚಿಕಿತ್ಸಾ ವಿಭಾಗದ ವೈದ್ಯರಾದ ಡಾ.ಹೆಚ್.ಪಲ್ಲವಿ, ಡಾ.ವೈ. ಎಂ.ಶಿಲ್ಪಶ್ರೀ, ಡಾ.ಮೌನೇಶ್ ಪತ್ತಾರ್, ಡಾ.ಶಶಿಧರ್, ಡಾ.ಮಧುಚಂದನ್ ಹಾಗೂ ವಿವಿಧ ವಿಭಾಗದ ಮುಖ್ಯಸ್ಥರು.**

# ಪ್ರಜಾಪ್ರಭುತ್ವದ ಯಶಸ್ಸಿನಲ್ಲಿ ಮತದಾರರ ಪಾತ್ರ ಮುಖ್ಯ

◀◀ ...1ನೇ ಪುಟದಿಂದ

ಕೋಟ್ಯಂತರ ರೂಪಾಯಿ ನಗದು, ಲಕ್ಷಾಂತರ ಬೆಲೆ ಬಾಳುವ ವಸ್ತು ಸಾಮಾಗ್ರಿಗಳು ಮತ್ತು ಮದ್ಯವನ್ನು ವಶಪಡಿಸಿಕೊಳ್ಳುವುದನ್ನು ನಾವು ಕಾಣಬಹುದು. ಇವು ಮತದಾರರಿಗೆ ಹಂಚಲು ತಂದಿಟ್ಟ ವಸ್ತುಗಳು ಎಂಬುದು ಸಾಮಾನ್ಯ ಜನರಿಗೂ ತಿಳಿದ ವಿಚಾರ. ದೇಶ ಮತ್ತು ಸಮಾಜ ಅಭಿವೃದ್ಧಿಯ ಬಗೆಗೆ ಕಾಳಜಿಯಿರುವ ವ್ಯಕ್ತಿಗೆ ಇಂತಹ ಘಟನೆಗಳನ್ನು ನೋಡಿದಾಗ ತೀವ್ರವಾದ ಆಘಾತವಾಗುತ್ತದೆ. ನಮ್ಮ ರಾಜಕೀಯವ್ಯವಸ್ಥೆ ಎಲ್ಲಿಗೆ ಹೋಗುತ್ತಿದೆ ಎಂಬ ಭಯ ಮೂಡುತ್ತದೆ. ದೇಶದ ಮುಂದಿನ ಕರಾಳಭವಿಷ್ಯದ ವಿಚಾರದಲ್ಲಿ ಆತಂಕವಾಗುತ್ತದೆ.

ಅರವತ್ತರ ದಶಕದಲ್ಲಿ ನಾನು ಪಿ.ಯು. ವ್ಯಾಸಂಗ ಮಾಡುತ್ತಿದ್ದೆ. ಆಗ ನಾವು ಚುನಾವಣೆಗೆ ಸ್ಪರ್ಧಿಸುತ್ತಿದ್ದ ಅಭ್ಯರ್ಥಿಗಳಲ್ಲಿ ಎಲ್ಲಾ ಸಮುದಾಯದವರು ಇರಬೇಕು ಎಂದು ಮಾತನಾಡುತ್ತಿದ್ದೆವು. ಅದೇನೂ ದೊಡ್ಡ ಧ್ವನಿ ಮಾತಲ್ಲ. ಮಿತ್ರರು ಆಡುತ್ತಿದ್ದ ಮಾತು. ದೇವರಾಜ ಅರಸು ಮುಖ್ಯಮಂತ್ರಿಯಾದ ಮೇಲೆ ಅವಗಣಿತ ಸಮಾಜಕ್ಕೆ ರಾಜಕೀಯ ಅಧಿಕಾರ ದೊರೆಯಲು ಪ್ರಾರಂಭವಾಯಿತು.

ಹಿಂದಿನಿಂದಲೂ ಚುನಾವಣೆಗಳು ನಡೆಯುತ್ತಿದ್ದನ್ನು ನೋಡುತ್ತಾ ಬಂದಿದ್ದೇನೆ. ನಮ್ಮೂರಿನಲ್ಲಿ ಗೌಡರು ಅಥವಾ ಪಟೇಲರ ಮುಂದಾಳತ್ವದಲ್ಲಿ ಚುನಾವಣೆಗಳು ನಡೆಯುತ್ತಿದ್ದವು. ಆಗ ಕಾರು ಇಷ್ಟಿರಲಿಲ್ಲ. ಒಮ್ಮೆ ಅಭ್ಯರ್ಥಿ ಅಥವಾ ಅವರ ಕಡೆಯವರು ಗ್ರಾಮಕ್ಕೆ ಬಂದರೆ ಹೆಚ್ಚು. ಅವರೇನಾದರೂ ಊರಿನ ಮುಖ್ಯಸ್ಥರಿಗೆ ಐನೂರು ಅಥವಾ ಸಾವಿರರೂಪಾಯಿಗಳನ್ನು ಕೊಡಲು ಹೋದರೆ 'ನಾವೇನೂ ನಿಮ್ಮ ಹಣದಾಗ ಚುರುಮುರಿ ತಿನ್ನಾಬೇಕಾ' ಎಂದು ಮುಖಕ್ಕೆ ಹೊಡೆದಂತೆ ಹೇಳುತ್ತಿದ್ದರು. ಪ್ರಚಾರಕ್ಕೆ ಬರುವವರಿಗೆ ಊರಿನವರೇ ಊಟ ತಿಂಡಿ ಕೊಡುತ್ತಿದ್ದರು. ಇನ್ನು ಚುನಾವಣೆಯಂತೂ ಹಬ್ಬದ ರೀತಿ ಸಂಭ್ರಮದಿಂದ ನಡೆಯುತ್ತಿತ್ತು. ಆಗಲೂ ರಾಜಕೀಯ ಪಕ್ಷಗಳ ಪೈಪೋಟಿಯಿದ್ದರೂ ಯಾರು ವೈಯಕ್ತಿಕ ಮಟ್ಟದಲ್ಲಿ ಬೈಗುಳ ಮಾಡುತ್ತಿರಲಿಲ್ಲ. ಜಾತಿಯ ಪ್ರಭಾವವಿಲ್ಲವೆಂದು ಹೇಳುವಂತಿರಲಿಲ್ಲ. ಸಾಮಾನ್ಯವಾಗಿ ಕಾಂಗ್ರೆಸ್ ಪಕ್ಷವೇ ಪ್ರಬಲ ಪಕ್ಷವಾದ ಕಾರಣ ಅದರಲ್ಲಿ ಮೇಲ್ವರ್ಗದವರು ಹೆಚ್ಚಾಗಿದ್ದರು. ಆಗ ಜನರು ತುಂಬ ಮುಗ್ಧರಿದ್ದರು. ಸಾಕ್ಷರತೆಯ ಪ್ರಮಾಣ ಅತ್ಯಂತ ಕಡಿಮೆ ಪ್ರಮಾಣದಲ್ಲಿತ್ತು. ಅವರಿಗೆ ಸಾಮಾಜಿಕ ನ್ಯಾಯ ಅಥವಾ ದುಡಿಯುವ ಕೈಗಳಿಗೆ ಉದ್ಯೋಗ ಕೊಡುವ ರಾಜಕೀಯಪಕ್ಷಗಳಿಗೆ ಓಟು ಹಾಕಿ ಎಂದರೆ ಅವರು ತಮ್ಮ ಕಾಂಗ್ರೆಸ್‌ಪಕ್ಷದ ನಿಷ್ಠೆ ಬಿಟ್ಟವರಲ್ಲ. ಮತದಾರರಲ್ಲಿ ಸಾಕ್ಷರತೆಯ ಪ್ರಮಾಣ ಹೆಚ್ಚಾದರೆ ಅವರಲ್ಲಿ ಜಾಗೃತಿ ಮೂಡುತ್ತದೆ, ಅವರಲ್ಲಿ ರಾಜಕೀಯ ಪ್ರಜ್ಞೆ ಬೆಳೆಯುತ್ತದೆ ಎಂಬ ಆಶಯ ಆ ಕಾಲದ ಬಹುಸಂಖ್ಯಾತ ಯುವಜನರಲ್ಲಿತ್ತು.

ಇಂದು ಸಾಕ್ಷರತೆ ಪ್ರಮಾಣ ಹೆಚ್ಚಾಗಿದೆ. ರಾಜಕೀಯಪ್ರಜ್ಞೆಯೂ ಜಾಗೃತವಾಗಿದೆ. ಹಿಂದಿಗಿಂತ ಇಂದು ಜನರಲ್ಲಿ ಆರ್ಥಿಕಶಕ್ತಿ ಹೆಚ್ಚಾಗಿದೆ. ಒಳಿತು–ಕೆಡಕುಗಳನ್ನು ತಿಳಿಯುವ ಪ್ರಬುದ್ಧತೆ ಸಹ ಅವರಲ್ಲಿದೆ. ಅಂದು ನಾವುಗಳು ಯಾವ ನಿರೀಕ್ಷೆಯಿಟ್ಟುಕೊಂಡಿದ್ದೇವೋ ಅದು ಈಡೇರುವ ಲಕ್ಷಣ ಕಾಣಬರುತ್ತಿಲ್ಲ. ದೇಶವನ್ನು ಸರಿದಾರಿಗೆ ಕೊಂಡ್ಯೊಯುವ ಮತದಾನದ ಪ್ರಕ್ರಿಯೆ ಅನೇಕ ವಿಷವರ್ತುಲಕ್ಕೆ ಸಿಲುಕಿ ಮೂಲ ಉದ್ದೇಶವೇ ಮರೆಯಾಗುವಂತೆ ಮಾಡಲಾಗಿದೆ. ಈ ಕಾಯಿಲೆ ನಗರ ಮತ್ತು ಗ್ರಾಮೀಣ ಪ್ರದೇಶಗಳೆಂಬ ಭೇದವಿಲ್ಲದೆ ಜಾಳಿ ಮುಳ್ಳಿನಂತೆ ಎಲ್ಲೆಡೆ ಹಬ್ಬಿದೆ. ಎರಡು ಕಡೆ ಬಹುಸಂಖ್ಯಾತ ಮತದಾರರು ಕಡು ಭ್ರಷ್ಟರಾಗಿದ್ದಾರೆ. ಭ್ರಷ್ಟತೆ ಎನ್ನುವುದನ್ನು ಹಣವೊಂದರಿಂದಲೇ ಅಳೆಯುವಂತಿಲ್ಲ. ಅಲ್ಲಿ ಜಾತಿ, ಭಾಷೆ, ಧರ್ಮ, ಪ್ರದೇಶ, ಲಿಂಗ ಹೀಗೆ ಅನೇಕ ಸಂಗತಿಗಳು ಮತದಾರರ ಮೇಲೆ ಪ್ರಭಾವ ಬೀರಿ ಆತ ಸ್ವತಂತ್ರವಾಗಿ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗದಷ್ಟು ಕಳಾಹೀನನಾಗಿದ್ದಾನೆ. ರಾಜಕಾರಣಿಗಳು ಚುನಾವಣೆಯ ನಂತರ ನಮ್ಮ ಕೈಗೆ ಸಿಗುವುದಿಲ್ಲ, ಚುನಾವಣೆಯ ಸಂದರ್ಭದಲ್ಲಿ ಅವರಿಂದ ಏನೂ ಸಾಧ್ಯವೋ ಅದನ್ನೆಲ್ಲಾ ಬಾಚಿಕೊಳ್ಳೋಣ ಎನ್ನುವ ಮನಸ್ಥಿತಿಯಲ್ಲಿ ಮತದಾರರಿದ್ದಾರೆ. ಹಣದ ಬಲದ ಜೊತೆ ತೋಳ್ಬಲದ ಪ್ರವೇಶವನ್ನು ರಾಜಕಾರಣದಲ್ಲಿ ಕಾಣಬಹುದು. ಹಿಂದೆ ರಾಜಕಾರಣಕ್ಕೆ ಬರುವವರು ಸಾರ್ವಜನಿಕ ಕ್ಷೇತ್ರದಲ್ಲಿ ಆಸಕ್ತಿಯಿರುವವರು ಎಂಬ ಭಾವನೆಯಿತ್ತು. ಇಂದು ದುಡ್ಡು ಉಳ್ಳವವರು ಹಾಗು ಯಥೇಚ್ಛವಾದ ಹಣ ಹೊಂದಿರುವವರು ಅದರ ರಕ್ಷಣೆಗೆ ರಾಜಕಾರಣಕ್ಕೆ ಬರುತ್ತಿದ್ದಾರೆ ಎಂಬುದು ಎಲ್ಲರಿಗೂ ತಿಳಿದ ವಿಚಾರ.

ಇಂತಹ ವಿಷಮ ಸಂದರ್ಭದಲ್ಲಿ ಭಾರತದ ಪ್ರಜಾಪ್ರಭುತ್ವವಿದೆ. 'ಸರ್ವನಾಶದ ಮೊದಲ ಹೆಜ್ಜೆ ಕೆಟ್ಟ ಆಡಳಿತ' ಥಿಯೋಡೋರ್ ಪಾರ್ಕರ್ ಎಂಬ ಚಿಂತಕ ಹೇಳುತ್ತಾನೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಕೆಟ್ಟ ಆಡಳಿತಕ್ಕೆ ನೇರ ಹೊಣೆ ಮತದಾರನಾಗಿರುತ್ತಾನೆ. ಇಂದು ಎಲ್ಲ ರಾಜಕೀಯಪಕ್ಷಗಳು ಮತದಾರನಿಗೆ ಹತ್ತು ಹಲವು ಆಮಿಷಗಳನ್ನು ತೋರಿಸುತ್ತಾ ಅವರನ್ನು ಕುಬ್ಜರನ್ನಾಗಿಸುತ್ತಿದೆ. ಅದರಲ್ಲಿ ಉಚಿತ ಕೊಡುಗೆಗಳಿರಬಹುದು. ಚುನಾವಣಾ ಪೂರ್ವದಲ್ಲಿ ನೀಡಿದ ಗಿಫ್ಟ್‌ಗಳಿರಬಹುದು. ಮತದಾರರು ತಾತ್ಕಾಲಿಕ ಕೊಡುಗೆಗಳಿಗೆ ಒಲಿಯುವುದರಿಂದ ಯಾರು ದೇಶದ ಸಮಸ್ಯೆಗಳ ಬಗೆಗೆ ಮಾತನಾಡುವುದೇ ಇಲ್ಲ. ಶಿಕ್ಷಣ, ಆರೋಗ್ಯ, ಗ್ರಾಮೀಣಾಭಿವೃದ್ಧಿ, ಮೂಲಭೂತಸೌಕರ್ಯ, ಕೈಗಾರಿಕೆ, ನೀರಾವರಿ, ರಸ್ತೆ ಸಾರಿಗೆ, ಉದ್ಯೋಗ, ರೈಲ್ವೆ, ಮಹಿಳಾ ಸಬಲೀಕರಣ, ಮಕ್ಕಳ ಆರೋಗ್ಯ ಮೊದಲಾದ ಅನೇಕ ವಿಚಾರಗಳ ಬಗ್ಗೆ ಯಾವುದೇ ರಾಜಕೀಯಪಕ್ಷಗಳು ಮಾತನಾಡುವುದಿಲ್ಲ. ಅವುಗಳಲ್ಲಿ ರಾಜಕೀಯಪಕ್ಷಗಳು ಅಧಿಕಾರಕ್ಕೆ ಬಂದಾಗ ತಾವು ಮಾಡುವ ಸುಧಾರಣೆಯನ್ನು ಜನತೆಯ ಮುಂದೆ ಹೇಳಬೇಕಾಗಿತ್ತು. ಯಾವುದೇ ರಾಜಕೀಯ ಪಕ್ಷಗಳು ವಾಸ್ತವಾಂಶದ ಆಧಾರದ ಮೇಲೆ ಚುನಾವಣಾ ಪ್ರಣಾಳಿಕೆಯನ್ನು ಸಿದ್ಧ ಮಾಡುತ್ತಿಲ್ಲ. ಆಕರ್ಷಕ ಮಾತು ಮತ್ತು ಭರವಸೆಗಳ ಮಹಾಪೂರವನ್ನೇ ಹರಿಸಿ ಮತದಾರರನ್ನು ಸೆಳೆಯುವ ಹುನ್ನಾರವನ್ನು ರಾಜಕೀಯಪಕ್ಷಗಳು ಮಾಡುತ್ತಿವೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಪ್ರಣಾಳಿಕೆ ಎಂಬುದು ರಾಜಕೀಯ ಪಕ್ಷ ಜನತೆಗೆ ನೀಡುವ ವಚನ. ಆ ವಚನವನ್ನು ಪಾಲಿಸದಿದ್ದರೆ ಅವರು ವಚನಭ್ರಷ್ಟರಾಗುತ್ತಾರೆ. ಮುಂದಿನ ಚುನಾವಣೆಯಲ್ಲಿ ಅವರು ಜನತೆಯ ಮುಂದೆ ಬಂದಾಗ ಜಾಗೃತ ಮತದಾರ ಅವರನ್ನು 'ಏಕೆ ನಿಮ್ಮ ಪ್ರಣಾಳಿಕೆಯನ್ನು ಅನುಷ್ಠಾನ ಮಾಡಿಲ್ಲ' ಎಂದು ಕೇಳಬೇಕು. ಇದಕ್ಕೆ ಮತದಾರರು ಜಾಗೃತವಾಗಬೇಕಾಗಿದೆ.



ಕರ್ನಾಟಕರಾಜ್ಯ ಕೇವಲ ಕೆಲವು ರಾಜಕಾರಣಿಗಳಿಗೆ ಸೇರಿದ ಬಳುವಳಿಯಲ್ಲ. ಆರುಕೋಟಿ ಕನ್ನಡಿಗರು ರಾಷ್ಟ್ರಕವಿ ಕುವೆಂಪು 'ವಿಚಾರಕ್ರಾಂತಿಗೆ ಆಹ್ವಾನ' ಎಂಬ ಭಾಷಣದಲ್ಲಿ ಹೇಳಿದ ಮಾತುಗಳನ್ನು ಜ್ಞಾಪಿಸಿಕೊಳ್ಳಬೇಕು. "ಜಾತಿ, ಮತ, ಹೆಂಡ, ದುಡ್ಡು ಇವು ಓಟುಗಳಾಗಬಾರದು. ಓಟು ಕೊಡುವ ಪ್ರಜೆಗಳು ಕೇವಲ ನಿಮಿತ್ತ ಅಥವಾ ಮೂಕ ಪ್ರಾಣಿಗಳಾಗಬಾರದು".

ಕರ್ನಾಟಕರಾಜ್ಯಕ್ಕೆ ಉನ್ನತ ಸಾಂಸ್ಕೃತಿಕ ಪರಂಪರೆಯಿದೆ. ಕರ್ನಾಟಕ ರಾಜ್ಯದ ಮತದಾರರು ಪ್ರಜ್ಞಾಪೂರ್ವಕವಾಗಿ ಮತದಾನ ಮಾಡಿ ರಾಷ್ಟ್ರದ ಗಮನ ಸೆಳೆದ ನಿದರ್ಶನಗಳು ನಮ್ಮ ಕಣ್ಮುಂದಿದೆ. ಅದನ್ನು ಜ್ಞಾಪಿಸಿಕೊಳ್ಳಬೇಕು.

2018ರಲ್ಲಿ ಬೆಂಗಳೂರು ನಗರದಲ್ಲಿ ಶೇಕಡ 54ರಷ್ಟು ಮತದಾನವಾಗಿತ್ತು. ವಿದ್ಯಾವಂತರು ಸಿನಿಕರಾಗಬಾರದು. ಮತದಾನ ಮಾಡದೇ ಕೇವಲ ಆಡಳಿತಕ್ಕೆ ಬಂದ ಸರ್ಕಾರಗಳನ್ನು ಟೀಕಿಸುವುದು ನಮ್ಮ ಹಕ್ಕು ಎಂದು ಅವರು ಭಾವಿಸಿಕೊಂಡಂತಿದೆ. ವಿದ್ಯಾವಂತರು ಮತಗಟ್ಟೆಗೆ ಕಡ್ಡಾಯವಾಗಿ ಬರಬೇಕು. ನಾನು ವೈದ್ಯಕೀಯಕ್ಷೇತ್ರದ ಎಲ್ಲರನ್ನು ಈ ಸಂದರ್ಭದಲ್ಲಿ ಮತದಾನ ಕಡ್ಡಾಯವೆಂದು ಭಾವಿಸಿಕೊಳ್ಳುವಂತೆ ಕೋರುತ್ತೇನೆ. ಎಷ್ಟೇ ಕಷ್ಟವಿದ್ದರೂ ವೈದ್ಯಕೀಯ ಕ್ಷೇತ್ರದಲ್ಲಿರುವ ಎಲ್ಲರೂ ಮತದಾನ ಮಾಡಲೇಬೇಕು.

ಯಾವುದೇ ಆಮಿಷ ಮತ್ತು ಒತ್ತಾಯಕ್ಕೆ ಕಟ್ಟುಬೀಳದೆ ಮತದಾನ ನಡೆದರೆ ಖಂಡಿತ ರಾಜ್ಯದಲ್ಲಿ ಜನಪರ ಸರ್ಕಾರ ಬರುವ ಎಲ್ಲಾ ಸಾಧ್ಯತೆಯಿದೆ. ಪ್ರಜಾಪ್ರಭುತ್ವದ ಕುರಿತಂತೆ ಮೊದಲ ಪ್ರಧಾನಿ ಜವಹರಲಾಲ್ ನೆಹರು ಹೇಳಿದ ಮಾತನ್ನು ಜ್ಞಾಪಿಸಿಕೊಳ್ಳುತ್ತೇನೆ."ಪ್ರಜಾಪ್ರಭುತ್ವ ವ್ಯವಸ್ಥೆ ಒಳ್ಳೆಯದು. ಉಳಿದ ಪದ್ಧತಿ ಅದಕ್ಕಿಂತ ಕೆಟ್ಟದ್ದು" .

ಪ್ರಜಾಪ್ರಭುತ್ವದ ಯಶಸ್ಸು ಪ್ರಜ್ಞಾವಂತ ಮತದಾರನ ಮೇಲೆ ನಿಂತಿರುತ್ತದೆ. ಬಹಳ ಹಿಂದೆ ಡಾ. ಎಂ.ಗೋಪಾಲಕೃಷ್ಣ ಅಡಿಗ ಅವರು ಬರೆದ ಪದ್ಯವೊಂದನ್ನು ತಮ್ಮ ಅವಗಾಹನೆಗೆ ತರುತ್ತಿದ್ದೇನೆ.

**ಮತವ ಕೊಡುವ ಮುನ್ನೊಮ್ಮೆ**
**ಯೋಚನೆಯ ಮಾಡು**
**ಉತ್ತಮರು ಯಾರೆಂದು ಪರಿಗಣಿಸಿ ನೋಡು**
**ಜಾತಿ, ಮತ, ಹಣ, ಹೆಂಡ ಇರುವೆಲ್ಲ ದೂರ**
**ನಾಡ ನಿರ್ಮಿತಿಗೆಲ್ಲ ನೀನೇ ಹೊಣೆಗಾರ.**

ಅರ್ಚನೆ



# ಶ್ರೀಮಾತೆಯರ ಬದುಕಿನ ಸಂಕೀರ್ಣ ಕ್ಷಣಗಳು ಭಗವಂತನು ಸ್ತ್ರೀಯಾಗಿ ಅವತರಿಸುವ ಸಡಗರ

ಡಾ. ಕೆ. ಅನಂತರಾಮು
ನಿವೃತ್ತ ಪ್ರಾಧ್ಯಾಪಕರು, ಮೈಸೂರು

**ಅವತಾರಿಗಳಾದವರು ಆ ದುಃಖಪರಂಪರೆಗಳನ್ನೆಲ್ಲಾ ನಗುನಗುತ್ತಲೆ ಜೀರ್ಣಿಸಿಕೊಂಡು, ಪುಟಕ್ಕೆ ಹಾಕಿದ ಚಿನ್ನದಂತೆ ಥಳಥಳಿಸುತ್ತಾ, ಲೋಕದ ಕಣ್ಣು ಕೋರೈಸುವಂತೆ ತಮ್ಮ ಸಾಧನೆಯ ಹೆಜ್ಜೆಗುರುತುಗಳನ್ನು ಈ ಜಗತ್ತಿನಲ್ಲಿ ಮೂಡಿಸಿ, ಇಲ್ಲಿಂದ ಕಣ್ಮರೆಯಾಗಿಬಿಡುತ್ತಾರೆ. ಅಂತಹ ದಿವ್ಯಾವತಾರಕ್ಕೆ ಮಾತೆಯವರ ಬದುಕೂ ಒಂದು ಶ್ರೇಷ್ಠವಾದ ಉದಾಹರಣೆಯಾಗಿದೆ.**

ಶ್ರೀಮಾತೆ ಶಾರದಾದೇವಿಯೆಂದರೆ ಅವರು ಜಗನ್ಮಾತೆಯ ಅವತಾರಸ್ವರೂಪರಾಗಿದ್ದಾರೆ. ಜಗನ್ಮಾತೆಯೇ ಆಗಿರಲಿ ಮಾನವದೇಹವನ್ನು ಧರಿಸಿಕೊಂಡು ಬಂದ ಮೇಲೆ, ಮಾನವ ಸಹಜ ಹಸಿವು ಬಾಯಾರಿಕಗಳನ್ನಾಗಲಿ, ಕಷ್ಟಕೋಟಲೆಗಳನ್ನಾಗಲಿ, ಹರ್ಷ ವಿಷಾದಗಳನ್ನಾಗಲಿ ನಿಂದೆಸ್ತುತಿ ಗಳನ್ನಾಗಲಿ, ರೋಗರುಜಿನಗಳನ್ನಾಗಲಿ, ಚಿಂತೆವಿರಹಗಳನ್ನಾಗಲಿ ಅನುಭವಿಸಲೇ ಬೇಕಾಗುತ್ತದೆ. ಸಾಮಾನ್ಯರಾದವರು ಅವುಗಳನ್ನೇಲ್ಲಾ ಅನುಭವಿಸಿ, ಜರ್ಜರಿತವಾಗಿ ಯಾವ ವಿಶೇಶವನ್ನು ಸಾಧಿಸದೆ ಮರಣಧರ್ಮಕ್ಕೆ ತುತ್ತಾಗಿ ಕೊನೆಗಾಣುತ್ತಾರೆ. ಆದರೆ ಅವತಾರಿಗಳಾದವರು ಆ ದುಃಖಪರಂಪರೆಗಳನ್ನೆಲ್ಲಾ ನಗುನಗುತ್ತಲೆ ಜೀರ್ಣಿಸಿಕೊಂಡು, ಪುಟಕ್ಕೆ ಹಾಕಿದ ಚಿನ್ನದಂತೆ ಥಳಥಳಿಸುತ್ತಾ, ಲೋಕದ ಕಣ್ಣು ಕೋರೈಸುವಂತೆ ತಮ್ಮ ಸಾಧನೆಯ ಹೆಜ್ಜೆಗುರುತುಗಳನ್ನು ಈ ಜಗತ್ತಿನಲ್ಲಿ ಮೂಡಿಸಿ, ಇಲ್ಲಿಂದ ಕಣ್ಮರೆಯಾಗಿಬಿಡುತ್ತಾರೆ. ಅಂತಹ ದಿವ್ಯಾವತಾರಕ್ಕೆ ಮಾತೆಯವರ ಬದುಕೂ ಒಂದು ಶ್ರೇಷ್ಠವಾದ ಉದಾಹರಣೆಯಾಗಿದೆ. ಶ್ರೀಮಾತೆಯವರಿಗೆ ಶ್ರೀರಾಮ ಕೃಷ್ಣರೊಡನೆ ವಿವಾಹವು ನೆರವೇರಿತೆಂಬುದು ಒಂದು ಲೀಲೆಯಷ್ಟೆ! ಆಗ ಶ್ರೀಮಾತೆಗೆ 5 ವರ್ಷ, ಪರಮಹಂಸರಿಗೆ 23 ವರ್ಷ! ಅದೆಲ್ಲಾ ವಿಧಿವಿಲಾಸವಲ್ಲದೆ ಮತ್ತೇನು? ಪೂರ್ವಕರ್ಮಗಳೆಲ್ಲವೂ ಸಂಪೂರ್ಣವಾಗಿ ತೊಳೆದು ಹೋಗಬೇಕಲ್ಲವೇ? ಅದಕ್ಕೇಂದೇ ಆ ವಿವಾಹವು ಜರುಗಿತು, ಶ್ರೀಮಾತೆಯವರಾದರೋ ಗೃಹತಪಸ್ವಿನಿಯಾಗಿ ಸಾಧನೆಮಾಡಿ ಜಗಜ್ಜನನಿಯ ಪಟ್ಟವೇರಿದರು.


ಭಗವಂತನು ಸ್ತ್ರೀದೇಹಧಾರಿಯಾಗಿ ಅವತರಿಸಿದರೆ ಏನೆಲ್ಲ ವೈವಿಧ್ಯಮಯವಾದ ಅದ್ಭುತಾವಳಿಗಳನ್ನು ಕಾಣಬಹುದು ಎಂಬುದಕ್ಕೆ ಶ್ರೀಮಾತೆಯವರ ಸಾಧನೆ ಸಿದ್ಧಿಗಳೇ ಶ್ರೇಷ್ಠ ಉದಾಹರಣೆಯಾಗಿದೆ.

ಶ್ರೀಮಾತೆಯವರು ಪಶ್ಚಿಮಬಂಗಾಳ ರಾಜ್ಯದ ರಾಜಧಾನಿಯಾದ ಕೊಲ್ಕೋತ್ತಾ ಮಹಾನಗರದಿಂದ ಸುಮಾರು 100 ಕಿಲೋಮೀಟರುಗಳಷ್ಟು ದೂರದಲ್ಲಿರುವ ಜಯರಾಮಬಾಟಿ ಎಂಬ ಗ್ರಾಮದಲ್ಲಿ 1853ರಲ್ಲಿ ಅವತರಿಸಿದರು. ರಾಮಚಂದ್ರಮುಖರ್ಜಿ ಮತ್ತು ಶ್ಯಾಮಸುಂದರಿ ಎಂಬ ಪುಣ್ಯದಂಪತಿಗಳೂ ಶ್ರೀಮಾತೆಯವರ ತಂದೆ–ತಾಯಿಗಳಾಗಿದ್ದರು. ಠಾಕೋರ್‌ಮಣಿ, ಕ್ಷೇಮಂಕರಿ ಎಂಬ ಹೆಸರುಗಳನ್ನಿಟ್ಟು ಕರೆದರಾದರೂ ಶಾರದಾಮಣಿದೇವಿ ಎಂಬುದೇ ಹೇಗೋ ಅವರ ಶುಭಮಂಗಳನಾಮವಾಗಿ ಗಟ್ಟಿಯಾಗಿ ಉಳಿದುಕೊಂಡಿತು. ಶ್ರೀಮಾತೆಯವರಿಗೆ 5ನೇ ವರ್ಷಕ್ಕೆ ಕೊಲ್ಕತ್ತೆಯ ದಕ್ಷಿಣೇಶ್ವರದಲ್ಲಿ ಸಾಧನಾನಿರತರಾಗಿದ್ದ ಶ್ರೀರಾಮ ಕೃಷ್ಣರೊಡನೆ 'ದಿವ್ಯ ವಿವಾಹ'ವು ನೆರವೇರಿತು. ಅವರು ಜಯರಾಮಬಾಟಿಯಿಂದ ಸುಮಾರು 8ಕಿಲೋಮೀಟರುಗಳ ದೂರದಲ್ಲಿದ್ದ ಕಾಮಾರಪುಕುರ ಎಂಬ ಗ್ರಾಮದಲ್ಲಿ ಖದೀಮ ರಾಮಚಟ್ಟೋಪಾಧ್ಯಾಯ ಮತ್ತು ಚಂದ್ರಮಣಿದೇವಿ ಎಂಬ ಪುಣ್ಯಶೀಲರ ಪುತ್ರರಾಗಿ, ಮಹಾವಿಷ್ಣುಸ್ವರೂಪವಾಗಿ ಅವತರಿಸಿದ್ದರು, ಪರಮಹಂಸರು ದಕ್ಷೀಣೇಶ್ವರದಲ್ಲಿ ರಾಣಿ ರಾಸಮಣಿ ಎಂಬ ಮಹಾಭಕ್ತೆಯು ನಿರ್ಮಿಸಿದ್ದ ಮಹೋಜ್ವಲವಾದ ಕಾಳಿಮಾತೆಯ ದೇವಾಲಯದಲ್ಲಿ ಅರ್ಚಕರಾಗಿ ಸೇವೆಸಲ್ಲಿಸುತ್ತಾ. ಆಗಾಗ ಸಮಾಧಿಸ್ಥಿತಿಗೆ ಏರಿಬಿಡುತ್ತಿದ್ದರು. ಲೋಕದ ಜನರು ಅದೊಂದು ಪರಿಯ ಹುಚ್ಚು ಎಂದು ತಪ್ಪು ತಿಳಿದುಕೊಂಡು, ಅದಕ್ಕೆ ಕಾರಣವಾಗಿ ಚಂದ್ರಮಣಿದೇವಿಯವರು ಬಹಳ ಗಡಿಬಿಡಿಗೆ ಸಿಲುಕಿಕೊಂಡು. ಹೇಗೋ ಬೇಗಬೇಗನೆ ಅವರ ವಿವಾಹವನ್ನು ನೆರವೇರಿಸಿಬಿಟ್ಟರು.



## ಶ್ರೀಮಾತೆಯವರಿಗೆ ಲೋಕಶಿಕ್ಷಣ

ವಿವಾಹ ನಂತರ ಶ್ರೀಮಾತೆಯವರು ಜಯರಾಮಬಾಟಿಯಲ್ಲಿಯೇ ತಮ್ಮ ತಂದೆ ತಾಯಿಗಳೊಡನೆ ಇದ್ದುಕೊಂಡು ಅತ್ಯಂತ ಚೈತನ್ಯಮಯಿಯಾಗಿದ್ದರು, ಮನೆಯಲ್ಲಿದ್ದುಕೊಂಡೇ ಸ್ವಪ್ರಯತ್ನದಿಂದ ಒಂದಿಷ್ಟು ಬಂಗಾಳಿ ಓದುಬರಹ ಕಲಿತುಕೊಂಡರು. ಶಾಲೆಯ ಓದಿನಿಂದ ದೂರವೇ ಇದ್ದುಬಿಟ್ಟರು.



ಶ್ರೀಮಾತೆಯವರಿಗೆ 14ವರ್ಷ ತುಂಬಿದಾಗ ಪರಮಹಂಸರು ದಕ್ಷಿಣೇಶ್ವರದಿಂದ ತಮ್ಮ ಊರಾದ ಕಾಮಾರಪುಕುರಕ್ಕೆ ಬಂದು ಸುಮರು 8ತಿಂಗಳ ಕಾಲ ವಾಸಮಾಡಿದರು, ಆ ಹೊತ್ತಿನಲ್ಲಿ ಪರಮಹಂಸರು ಶ್ರೀಮಾತೆಯವರನ್ನೂ ತಮ್ಮ ಮನೆಗೆ ಬರಮಾಡಿಕೊಂಡರು. ಮುಂದಿನ ಸಾಧನಾಮಯ ಜೀವನಕ್ಕೆ ಬೇಕಾಗುವಂತಹ ವಿದ್ಯೆಯನ್ನೆಲ್ಲಾ ಅವರಿಗೆ ಧಾರೆಯೆರೆದರು. ದೇವರಪೂಜೆ ಹೇಗೆ ಮಾಡಬೇಕು, ಬತ್ತಿಗಳನ್ನು ಹುರಿಗೊಳಿಸಿ ಹೇಗೆ ದೀಪ ಬೆಳಗಿಸಬೇಕು, ಜಪ ಮತ್ತು ಧ್ಯಾನಗಳನ್ನು ಹೇಗೆ ಮಾಡಬೇಕು, ತಾಂಬೂಲವನ್ನು ಹೇಗೆ ಸಿದ್ಧಪಡಿಸಬೇಕು, ಗುರುಹಿರಿಯರನ್ನು ಹೇಗೆ ಗೌರವಿಸಬೇಕು, ಕಿರಿಯರನ್ನೂ ಹೇಗೆ ಮಮತೆಯಿಂದ ಕಾಣಬೇಕು, ಎತ್ತಿನಗಾಡಿಯನ್ನೋ ದೋಣಿಯನ್ನೋ ಹತ್ತುವಾಗ ಇಳಿಯುವಾಗ ಹೇಗೆ ಎಚ್ಚರವಹಿಸಬೇಕು, ಆಗ ಒಯ್ಯುವ ಗಂಟುಮೂಟೆಗಳ ಮೇಲೆ ಹೇಗೆ ನಿಗಾ ಇಟ್ಟಿರಬೇಕು– ಎಂಬಂತೆ ಜೀವನೋಪಯೋಗಿಯಾದ ಎಲ್ಲಾ ಪಾಠಗಳನ್ನೂ ಅವರಿಗೆ ಬೋಧಿಸಿದರು. ಬಹಳ ಚೂಟಿಯಾದ, ಕುಶಾಗ್ರಮತಿಯಾದ ಬಾಲಕಿಯಾಗಿ ಬೆಳೆದಿದ್ದ ಶ್ರೀಮಾತೆಯವರು ಆಧ್ಯತ್ಮಿಕ ವಿಚಾರಗಳನ್ನು ಕೂಡ ಗ್ರಹಿಸಿಕೊಳ್ಳುವಷ್ಟು ಶಕ್ತಿಸಂಪನ್ನೆಯಾಗಿದ್ದರು. "ನನ್ನ ಪತಿದೇವರು ಹುಚ್ಚರಲ್ಲ, ಅವರೊಬ್ಬ ಲೊಕೋತ್ತರ ಪುರುಷರ, ಅವರೊಬ್ಬ ದೇವಮಾನವರು" ಎಂಬುದು ಕೂಡ ಆ ಹೊತ್ತಿನಲ್ಲಿ ಶ್ರೀಮಾತೆಯವರಿಗೆ ಮನದಟ್ಟಾಯಿತು, ಆ ಸಂದರ್ಭದಲ್ಲಿಯೇ ಶ್ರೀಮಾತೆಯವರು ವೈರಾಗ್ಯಜೀವನಕ್ಕೆ ಬೇಕಾಗುವ ಉಪದೇಶಗಳನ್ನು ಪರಮಹಂಸರಿಂದ ಪಡೆದುಕೊಂಡರು, ಆ ಪರಿಯ ಬೋಧನೆಯಿಂದಾಗಿ ಪರಮಹಂಸರು ಶ್ರೀಮಾತೆಯವರ ಹೃದಯದಲ್ಲಿ "ಆನಂದದ ಅಮೃತತಿಲಕ"ವನ್ನೇ ಪ್ರತಿಷ್ಠಾಪಿಸಿಬಿಟ್ಟರು.

## ದಕ್ಷಿಣೇಶ್ವರವು ಸಾಧನೆಯ ರಂಗಭೂಮಿ

ಶ್ರೀಮಾತೆಯವರು ಪರಮಹಂಸರಿಗೆ ಬೆಂಬಲಿಗರಾಗಿದ್ದು ಅವರ ಆಧ್ಯಾತ್ಮಿಕ ಸಾಧನೆಯಲ್ಲಿ ಪರಿಪೂರ್ಣ ಸಹಕಾರವನ್ನು ನೀಡಬೇಕು, ತಾವೂ ಸಾಧನೆಮಾಡಬೇಕು ಎಂಬ ಹಂಬಲದಿಂದ, ತಮ್ಮ 18ನೆಯ ವಯಸ್ಸಿಗೆ ದಕ್ಷಿಣೇಶ್ವರಕ್ಕೆ ಆಗಮಿಸಿದರು. ಶ್ರೀಮಾತೆಯವರು ಬಯಸಿದರಾದರೆ ಸಾಂಸಾರಿಕ ಜೀವನವನ್ನು ನಡೆಸುವ ಆಯ್ಕೆಯನ್ನು ಪರಮಹಂಸರು ಅವರ ಮುಂದಿಟ್ಟರು. ಮಾತೆಯವರಾದರೋ ಪರಮಹಂಸರ ಅವತಾರ ಲೀಲಾಸಹಧರ್ಮಿಣಿಯಾಗಿ ಅವತರಿಸಿ ಬಂದಿದ್ದರೇ ಹೊರತು, ಅವರನ್ನು ಸಂಸಾರದ ಬಲೆಗೆ ಸಿಲುಕಿಸಲು ಬಂದವರಾಗಿರಲಿಲ್ಲ", ಆದ್ದರಿಂದ ತಾವೂ ಕಠಿಣ ತಪೋಮಾರ್ಗವನ್ನೇ ಆಯ್ಕೆಮಾಡಿಕೊಂಡರು.

ಶ್ರೀಮಾತೆಯವರು ಪರಮಹಂಸರ ಕೊಠಡಿಯಿಂದ ಪ್ರತ್ಯೇಕವಾಗಿ ಅತ್ಯಂತ ಕಿಷ್ಕಿಂಧವಾದ ಕೊಠಡಿಯೊಂದರಲ್ಲಿ ವಾಸಮಾಡುತ್ತಿದ್ದರು ಅಲ್ಲಿ ಅಡುಗೆ ಮಾಡಿ, ಪರಮಹಂಸರಿಗೆ ಹಳುಹಿಸಿಕೊಟ್ಟು, ಭಕ್ತರು ಮತ್ತು ಆಶ್ರಿತರಿಗೂ ಉಣಬಡಿಸಿ, ತಾವೂ ಉಂಡು, ಅಲ್ಲಿಯೇ ಜಪತಪಾದಿಗಳನ್ನು ಮಾಡಿಕೊಂಡು ಕಾಲನೂಕುತ್ತಿದ್ದರು. ಶ್ರೀಮಾತೆಯವರಲ್ಲದೆ ಮತ್ತಾರು ಅಂತಹ ಇಕ್ಕಟ್ಟಿನಲ್ಲಿ ವಾಸಮಾಡುವುದು ಸಾಧ್ಯವಿರಲಿಲ್ಲ.

ಪರಮಹಂಸರು ಸುಮಾರು 8 ತಿಂಗಳ ಕಾಲ ಶ್ರೀಮಾತೆಯವರನ್ನು ತಮ್ಮೊಡನೆಯೆ ಇರಿಸಿಕೊಂಡು ಏಳುಶಯ್ಯೆಯಲ್ಲಿಯೇ ರಾತ್ರಿಗಳನ್ನು ಕಳೆಯುತ್ತಿದ್ದರು. ಅಷ್ಟಾದರೂ ಅವರಿಬ್ಬರೂ ಪ್ರಕೃತ ಭೋಗಾಭಿಲಾಷೆಗೆ ತುತ್ತಾಗದೆ. ಕಾಮನ ಅಗ್ನಿಕುಂಡದಿಂದ ಥಳಥಳಿಸುವ ದಿವ್ಯಪುತ್ಥಳಿಗಳಾಗಿ ಮೇಲೆದ್ದುಬಂದರು.

## ದೇವಿತ್ರಿಪುರಸುಂದರೀಷೋಡಶೀ ಮಹಾವಿದ್ಯಾ

ವೈಶಾಖಮಾಸದ ಅಮವಾಸ್ಯೆಯು ಕಾಳಿಮಾತೆಯನ್ನು "ಫಲಹಾರಿಣೀ" ಎಂಬ ಭಕ್ತಿ ಭಾವದಿಂದ ಪೂಜಿಸುವ ದಿನವಾಗಿದೆ. ಅಂದು ತನ್ನನ್ನು ಪೂಜಿಸುವವರ ಪೂರ್ವಾರ್ಜಿತ ಕರ್ಮಗಳನ್ನೆಲ್ಲಾ ಶ್ರೀ ಕಾಳಿಮಾತೆಯು ಅಪಹರಿಸಿಬಿಡುತ್ತಾಳಾದ್ದರಿಂದ ಅವಳಿಗೆ 'ಫಲಹಾರಿಣಿ' ಎಂಬ ಬಿರುದು ಕೂಡಿಕೊಂಡಿದೆ. ಜಗನ್ಮಾತೆಯು 'ದಶಮಹಾವಿದ್ಯಾಸ್ವರೂಪಿಣಿ' ಎಂಬ ಹತ್ತು ನಾಮಗಳಿಂದ ಖ್ಯಾತಳಾಗಿದ್ದಾಳೆ. ಆ ಪೈಕೀ ತ್ರಿಪುರಸುಂದರಿಷೋಡಶೀ ಎಂಬುದು ಒಂದು. ಆ ಸ್ವರೂಪದಲ್ಲಿ ಜಗನ್ಮಾತೆಯು ಯಾವಾಗಲೂ ಹದಿನಾರರ ಹರೆಯದ ಪರಮಲಾವಣ್ಯವತಿಯಾಗಿ ತೊಳಗುತ್ತಿರುತ್ತಾಳಾದ್ದರಿಂದ ಷೋಡಶಿ(ಹದಿನಾರರ ಪ್ರಾಯದವಳು) ಎಂಬ ನಾಮವು ಅವಳಿಗೆ ಅನ್ವರ್ಥವಾಗಿದೆ.

(ಮುಂದುವರಿಯುತ್ತದೆ)

### ಲೇಖಕರು

ಡಾ. ಕೆ.ಅನಂತರಾಮು ಅವರು ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿ ಕೆಲಸ ಮಾಡಿ ನಿವೃತ್ತರಾಗಿದ್ದಾರೆ. ಅಧ್ಯಾಪಕವೃತ್ತಿಗೆಂದೇ ಜನಿಸಿದ ಶ್ರೇಷ್ಠ ಪ್ರಾಧ್ಯಾಪಕರು ಅವರು. ಅವರ ಪಾಠ, ಪ್ರವಚನಗಳೆಂದರೆ ವಿದ್ಯಾರ್ಥಿಗಳಿಗೆ ಸಂತೋಷವೋ ಸಂತೋಷ.

ಡಾ. ಅನಂತರಾಮು ಕನ್ನಡದ ಪ್ರಮುಖ ವಿದ್ವಾಂಸರಲ್ಲಿ ಒಬ್ಬರು. ಅವರ ಮೂರು ಪ್ರವಾಸ ಕಥನಗಳಿಗೂ 'ಕರ್ನಾಟಕರಾಜ್ಯ ಸಾಹಿತ್ಯ ಅಕಾಡೆಮಿಯ' ಪ್ರಶಸ್ತಿ ಬಂದಿದೆ. 'ಕವಿ ಬ್ರಹ್ಮಶಿವ– ಒಂದು ಅಧ್ಯಯನ' ಅವರ ಪಿ.ಹೆಚ್‌ಡಿ. ಪ್ರಬಂಧದ ವಸ್ತು. ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರು.

ಶ್ರೀರಾಮಕೃಷ್ಣ ಆಶ್ರಮ ಸೇರಿದಂತೆ ರಾಜ್ಯದ ಎಲ್ಲೆಡೆ ಸಾವಿರಾರು ಉಪನ್ಯಾಸಗಳನ್ನು ನೀಡಿದ್ದಾರೆ. ಅಧ್ಯಾತ್ಮ ಮತ್ತು ಪ್ರವಾಸ ಅವರಿಗೆ ಪ್ರಿಯವಾದ ಕ್ಷೇತ್ರಗಳು. ಅತ್ಯಂತ ಸರಳ ವ್ಯಕ್ತಿತ್ವದ ಡಾ. ಅನಂತರಾಮು ತಮ್ಮ ಮಾತಿನ ಮೋಡಿಯಿಂದ ಎಲ್ಲರ ತನ್ನತ್ತ ಸೆಳೆಯಬಲ್ಲ ವಾಗ್ಮಿ.

ಶ್ರೀರಾಮಕೃಷ್ಣ ಪರಮಹಂಸರ ಬದುಕಿನಲ್ಲಿ ಅತ್ಯಂತ ಪ್ರಭಾವಶಾಲಿ ವ್ಯಕ್ತಿಯಾಗಿರುವ ಶ್ರೀ ಶಾರದಾಮಾತೆಯನ್ನು ಕುರಿತು ನಮ್ಮ ಪತ್ರಿಕೆಗಾಗಿ ಡಾ.ಅನಂತರಾಮು ವಿಶೇಷ ಲೇಖನ ಬರೆದಿದ್ದಾರೆ. ಶ್ರೀ ರಾಮಕೃಷ್ಣ ಆಶ್ರಮದ ಇತಿಹಾಸದಲ್ಲಿ ಮೂರು ಮಹಾಚೇತನಗಳಿಗೆ ಅಗ್ರಸ್ಥಾನ. ಮೊದಲನೆಯವರು ಶ್ರೀ ರಾಮಕೃಷ್ಣ ಪರಮಹಂಸರು. ಶ್ರೀಮಾತಾ ಎಂದೇ ಖ್ಯಾತರಾಗಿರುವ ಶ್ರೀ ಶಾರದಾಮಾತೆಯವರು ಎರಡನೆಯವರು. ಇಬ್ಬರನ್ನು ವಿಶ್ವಕ್ಕೆ ಪರಿಚಯಿಸಿದ ಸ್ವಾಮಿ ವಿವೇಕಾನಂದರು ಮೂರನೆಯವರಾಗಿದ್ದಾರೆ. ಇದೀಗ ಶ್ರೀಮಾತಾ ಶಾರದಾದೇವಿ ಅವರ ಮಹಿಮೆಯನ್ನು ಕೇಳೋಣ!

Printed and Published by **Shridevi Media Center,** Lingapura, NH 4, Sira Road, Tumakuru - 572106,, Mob: 94480 82844 and
Printed at **Maruthi Printing Press,** No.90/6-1. 1st cross, Vittal Nagar West, Near Marvel Apartment, Bengaluru-560026. Editor: **Ambika M Hulinaykar**